ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

17 ಜುಲೈ, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 126 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಕಾರ್ಡಿಫ್‌ನಲ್ಲಿ ಗುರುವಾರ ಇಂಗ್ಲೆಂಡ್ ವಿರುದ್ಧ ನಡೆದ 2ನೇ ಏಕದಿನ ಪಂದ್ಯದಲ್ಲಿ ಭಾರತ ಕೊಹ್ಲಿ (65), ಶ್ರೇಯಸ್ (66) ಅವರ ಅರ್ಧ ಶತಕದ ನೆರವಿನಿಂದ 233 ರನ್ ಕಲೆ ಹಾಕಿದೆ...



ತೆರೆಗೆ ಬರಲಿವೆ ಸಾಲು ಸಾಲು ಬಯೋಪಿಕ್ ಸಿನಿಮಾಗಳು » 2


ಬೆಳೆ ವಿಮೆ ಬಗ್ಗೆ ಅರಿವು ಮೂಡಿಸಲು ಸೂಚನೆ » 3


ಹಾಸನ ಕ್ಷೇತ್ರದಲ್ಲಿ ಶೇ.100 ರಷ್ಟು ಗಣತಿ ನಮೂನೆ ವಿತರಣೆ » 4


# ಖರ್ಗೆ ಗೈರು: ಸಂಪುಟ ವಿಸ್ತರಣೆ ಸಭೆ ಮುಂದೂಡಿಕೆ

## ರಾಹುಲ್ ಗಾಂಧಿ ಜೊತೆ ಚರ್ಚೆ ನಡೆಸಿದ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ

• ಪ್ರಜೋದಯ ವರದಿ

**ನವದೆಹಲಿ:** ಸಚಿವ ಸಂಪುಟ ವಿಸ್ತರಣೆ ಕಸರತ್ತು ನಡೆಯುತ್ತಿರುವ ಹೊತ್ತಿನಲ್ಲೇ 20ಕ್ಕೂ ಹೆಚ್ಚು ಶಾಸಕರು ದೆಹಲಿಯಲ್ಲಿ ಬೀಡುಬಿಟ್ಟು, ಸಚಿವ ಸ್ಥಾನಕ್ಕೆ ಪಟ್ಟು ಹಿಡಿದಿದ್ದಾರೆ. ಈ ಮಧ್ಯೆ ಗುರುವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಸಚಿವ ಸಂಪುಟ ವಿಸ್ತರಣೆ ಕುರಿತು ಚರ್ಚೆ ನಡೆಸಿದರು.

ಸೋನಿಯಾ ಗಾಂಧಿ ನಿವಾಸದಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ, ಆರಂಭಿಕ ಸುತ್ತಿನ ಮಾತುಕತೆ ನಡೆಸಿರುವ ಡಿ.ಕೆ.ಶಿವಕುಮಾರ್ ಅವರು, ಜು.20 ಹಾಗು ಜುಲೈ 22 ರಂದು ಸಂಪುಟ ವಿಸ್ತರಣೆಗೆ ಹೈಕಮಾಂಡ್ ಮುಂದೆ ಎರಡು ದಿನಾಂಕಗಳನ್ನು ಪ್ರಸ್ತಾಪಿಸಿದ್ದಾರೆ. ರಾಹುಲ್ ಗಾಂಧಿ ಅವರೊಂದಿಗೆ ಸಭೆ ಅಂತ್ಯಗೊಂಡ ಬಳಿಕ ಡಿ.ಕೆ ಶಿವಕುಮಾರ್, ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಹಾಗು ರಣದೀಪ್ ಸುರ್ಜೇವಾಲಾ ಅವರ ಸಮ್ಮುಖದಲ್ಲಿ 2ನೇ ಸುತ್ತಿನ ಚರ್ಚೆ ನಡೆಸಿದ್ದಾರೆ.

ಈ ನಡುವೆ ಮಗನ ಆರೋಗ್ಯದಲ್ಲಿ ಏರುಪೇರಾಗಿರುವ ಹಿನ್ನಲೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ತೆರಳಿದ್ದು, ಈ ಸಭೆಯಲ್ಲಿ ಭಾಗಿಯಾಗಿಲ್ಲ. ಕೆ.ಸಿ. ವೇಣುಗೋಪಾಲ್ ಅವರು ಸಹ ಅನಾರೋಗ್ಯದ ಕಾರಣದಿಂದ ಗೈರಾಗಿದ್ದರು. ಈ ಹಿನ್ನಲೆ ಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಲಾಗಿದೆ. ಖರ್ಗೆ ಅವರು ವಾಪಾಸ್ಸಾದ ಬಳಿಕ ಮತ್ತೆ ವಿಸ್ತೃತ ಚರ್ಚೆ ಮಾಡುವುದಾಗಿ ರಾಹುಲ್ ಅವರು ತಿಳಿಸಿದ್ದಾರೆ.

**ಸುರ್ಜೇವಾಲಾ ಜೊತೆ ಸಮಾಲೋಚನೆ**

ಡಿ.ಕೆ.ಶಿವಕುಮಾರ್ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿಯಾಗಿ ಮಹತ್ವದ ಸಮಾಲೋಚನೆ ನಡೆಸಿದರು. ರಾಜಕೀಯ ವಿದ್ಯಮಾನಗಳು, ಸಂಪುಟ



ವಿಸ್ತರಣೆ ಹಾಗು ಪಕ್ಷದ ಆಡಳಿತಾತ್ಮಕ ವಿಷಯಗಳ ಕುರಿತು ಇಬ್ಬರು ನಾಯಕರು ಸುದೀರ್ಘವಾಗಿ ಚರ್ಚಿಸಿದರು. ಸುರ್ಜೇವಾಲಾ ಅವರೊಂದಿಗೆ ಸಭೆ ಮುಗಿದ ಬೆನ್ನಲ್ಲೇ ಡಿ.ಕೆ. ಶಿವಕುಮಾರ್‌ದೆಹಲಿಯ ಕರ್ನಾಟಕ ಭವನಕ್ಕೆ ತೆರಳಿದರು.

ಮುಖ್ಯಮಂತ್ರಿ ತೆರಳಿದ ನಂತರ ಉಸ್ತುವಾರಿಯವರೊಂದಿಗೆ ಪ್ರತ್ಯೇಕವಾಗಿ ಕುಳಿತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸುದೀರ್ಘ ಸಮಾಲೋಚನೆ ನಡೆಸಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕರ್ನಾಟಕ ಭವನದಲ್ಲಿ ಬೀಡು ಬಿಟ್ಟಿರುವ ರಾಜ್ಯದ ಶಾಸಕರನ್ನು ಭೇಟಿಯಾದರು. ಶಾಸಕರು ತಮ್ಮ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳು, ಯೋಜನೆಗಳು ಮತ್ತು ಪ್ರಮುಖ ಬೇಡಿಕೆಗಳ ಕುರಿತು ಮುಖ್ಯಮಂತ್ರಿಗೆ ಮನವಿ ಪತ್ರಗಳನ್ನು ಸಲ್ಲಿಸಿದರು.

**ಚರ್ಚೆ 2 ದಿನ ಮುಂದೂಡಿಕೆ : ಹರಿಪ್ರಸಾದ್**

ಸಂಪುಟ ವಿಸ್ತರಣೆ ಕುರಿತು ನಾವು ಕೆಲವು ವಿಷಯಗಳ ಬಗ್ಗೆ ಚರ್ಚಿಸಿದ್ದೇವೆ. ಅದರ ಹೊರತಾಗಿ, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ಹೋಗಿದ್ದಾರೆ. ಹೀಗಾಗಿ ಒಂದು ಅಥವಾ ಎರಡು ದಿನ ಮಾತುಕತೆ ಮುಂದೂಡಲಾಗಿದೆ. ಯಾರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ. ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ತಿಳಿಸಿದ್ದಾರೆ.

### ಇನ್ನೂ ಸಿದ್ಧವಾಗದ ಅಂತಿಮ ಪಟ್ಟಿ

ಸಂಪುಟ ವಿಸ್ತರಣೆ ಕರಸತ್ತು ತೀವ್ರಗೊಂಡಿದ್ದು, ಕಾಂಗ್ರೆಸ್‌ನ ಹಲವು ಶಾಸಕರು ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸುತ್ತಿದ್ದಾರೆ. ಆದರೆ, ಇದುವರೆಗೂ ನೂತನ ಸಚಿವರ ಪಟ್ಟಿ ಅಂತಿಮವಾಗಿಲ್ಲ. ಈ ಮಧ್ಯೆ, ಸಚಿವ ಸಂಪುಟ ವಿಸ್ತರಣೆಗೆ ಸಂಬಂಧಿಸಿದ ಚರ್ಚೆಯನ್ನು ತಾತ್ಕಾಲಿಕವಾಗಿ ಮುಂದೂಡಿರುವುದು ಆಕಾಂಕ್ಷಿಗಳಿಗೆ ನಿರಾಸೆ ಮೂಡಿಸಿದೆ.

# ಐತಿಹಾಸಿಕ ದ್ವಾರಸಮುದ್ರ ಕೆರೆಗೆ ಬಾಗಿನ ಅರ್ಪಣೆ

## ರಣಘಟ್ಟ ಯೋಜನೆ ಪೂರ್ಣಗೊಳಿಸುವ ಸಂಕಲ್ಪ ಮಾಡಿದ ಶಾಸಕ ಸುರೇಶ್



• ಪ್ರಜೋದಯ ವರದಿ

**ಹಳೇಬೀಡು:** ಇತಿಹಾಸ ಪ್ರಸಿದ್ಧ ಹೊಯ್ಸಳೇಶ್ವರ ಹಾಗು ಮಲ್ಲಿಕಾರ್ಜುನ ಸ್ವಾಮಿ ಕೃಪೆಯಿಂದ ದ್ವಾರಸಮುದ್ರ ಕೆರೆ ಭರ್ತಿಯಾಗಿದ್ದು, ಬಾಗಿನ ಅರ್ಪಿಸಲಾಗಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಐತಿಹಾಸಿಕ ಹಳೇಬೀಡಿನ ದ್ವಾರಸಮುದ್ರ ಕೆರೆಗೆ ಗುರುವಾರ ಬಾಗಿನ ಅರ್ಪಿಸಿ ಮಾತನಾಡಿದ ಅವರು, ಹಳೇಬೀಡು ಕೆರೆ ತುಂಬಿರುವುದು ಬೇಲೂರು ವಿಧಾನಸಭಾ ಕ್ಷೇತ್ರದ ಜನರಿಗೆ ಹೆಮ್ಮೆಯ ವಿಷಯ. 2017ರಲ್ಲಿ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ಈ ಭಾಗದ ಜಲಮೂಲಗಳು ಸಮೃದ್ಧಿಯಾಗಿವೆ ಎಂದರು.

ಶಾಸಕನಾದ ಬಳಿಕ ರಣಘಟ್ಟ, ಎತ್ತಿನಹೊಳೆ ಹಾಗು ಆಲದಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿಗೆ ವೇಗ ನೀಡಲಾಗಿದೆ. ಸದ್ಯ ದೊರೆತಿರುವ ನೀರು ತಾತ್ಕಾಲಿಕ ಅಗತ್ಯ ಪೂರೈಸಿದರೂ, ಕ್ಷೇತ್ರಕ್ಕೆ ಶಾಶ್ವತ ನೀರಿನ ಭದ್ರತೆ ಕಲ್ಪಿಸಲು ರಣಘಟ್ಟ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಈ ನಿಟ್ಟಿನಲ್ಲಿ ಎಲ್ಲಾ ಪ್ರಯತ್ನ ನಡೆದಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಸಚಿವರನ್ನು ಆಹ್ವಾನಿಸಿ ವಿಧಿವತ್ತಾಗಿ ಬಾಗಿನ ಅರ್ಪಿಸಲಾಗುವುದು. ಉಳಿದ ಅವಧಿಯಲ್ಲಿ ಬಾಕಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದರು.

ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ,

» ನಾಲ್ಕನೇ ಪುಟದಲ್ಲಿ

# ಅಧಿವೇಶನ ಬಳಿಕ ಪ್ರಾಕೃತ ವಿಶ್ವವಿದ್ಯಾಲಯ ಲೋಕಾರ್ಪಣೆ



• ಪ್ರಜೋದಯ ವರದಿ

**ಶ್ರವಣಬೆಳಗೊಳ:** ವಿಧಾನಸಭೆ ಅಧಿವೇಶನ ಮುಗಿದ ನಂತರ ಪ್ರಾಕೃತ ವಿಶ್ವವಿದ್ಯಾಲಯ ಲೋಕಾರ್ಪಣೆ ಸಮಾರಂಭಕ್ಕೆ ಬರುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭರವಸೆ ನೀಡಿದ್ದಾರೆ.

ಶ್ರವಣಬೆಳಗೊಳದಲ್ಲಿ ನಿರ್ಮಾಣಗೊಂಡಿರುವ ಪ್ರಾಕೃತ ವಿಶ್ವವಿದ್ಯಾನಿಲಯ, ನೂತನ ಭೋಜನ ಶಾಲೆ ಹಾಗು ಸಭಾಭವನ ಲೋಕಾರ್ಪಣೆ ಸಮಾರಂಭಕ್ಕೆ ಆಗಮಿಸುವಂತೆ ಮುಖ್ಯಮಂತ್ರಿಗೆ ಆಹ್ವಾನ ನೀಡಲಾಯಿತು. ವಿಧಾನಸೌಧದಲ್ಲಿ ಸಂಸದ ಶ್ರೇಯಸ್ ಪಟೇಲ್, ಶಾಸಕ ರಾದ ಕೆ.ಎಂ. ಶಿವಲಿಂಗೇಗೌಡ, ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಮಠದ ಪ್ರತಿನಿಧಿಗಳಾದ ರಾಜೇಶ್ ಖನ್ನಾ, ಇತರರು ಮನವಿ ಸಲ್ಲಿಸಿದರು.

**25 ಕೋ.ರೂ. ವೆಚ್ಚದಲ್ಲಿ ವಿಶ್ವವಿದ್ಯಾಲಯ**

2018ರ ವಿಶ್ವವಿಖ್ಯಾತ ಗೊಮ್ಮಟೇಶ್ವರ ಶ್ರೀ ಭಗವಾನ್ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ಸಮಾಧಿಸ್ಥ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಅಪೇಕ್ಷೆಯಂತೆ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಲೋಕೋಪಯೋಗಿ ಇಲಾಖೆಯ ಮೂಲಕ 25 ಕೋ.ರೂ. ವೆಚ್ಚದಲ್ಲಿ ಪ್ರಾಕೃತ ವಿಶ್ವವಿದ್ಯಾನಿಲಯ ನಿರ್ಮಿಸಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅನುದಾನದಡಿ ನಿರ್ಮಾಣಗೊಂಡಿರುವ ನೂತನ ಭೋಜನ ಶಾಲೆ ಹಾಗು ಸಭಾಂಗಣ ಕಾರ್ಯ ಪೂರ್ಣಗೊಂಡಿದೆ.

# ರೈತರ ಕೈ ಸೇರದ ರಾಗಿ ಖರೀದಿ ಎಂಎಸ್‌ಪಿ ಹಣ

## ಜಿಲ್ಲೆಯ 15 ಸಾವಿರಕ್ಕೂ ಹೆಚ್ಚು ರೈತರಿಗೆ 150 ಕೋ.ರೂ. ಬಾಕಿ | ಬರದ ಆತಂಕದ ನಡುವೆ ಸಂಕಷ್ಟದಲ್ಲಿ ಅನ್ನದಾತ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಬರದ ಛಾಯೆಯ ಆತಂಕದ ನಡುವೆಯೇ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ಖರೀದಿಸಿದ ರಾಗಿಯ ಹಣ ಬಿಡುಗಡೆಯಲ್ಲಿ ಆಗಿರುವ ವಿಳಂಬ ಜಿಲ್ಲೆಯ ಸಾವಿರಾರು ರೈತರನ್ನು ಆರ್ಥಿಕ ಸಂಕಷ್ಟಕ್ಕೆ ತಳ್ಳಿದೆ. ಬೆಳೆ ಮಾರಾಟ ಮಾಡಿದ ತಿಂಗಳುಗಳಾದರೂ ಹಣ ಕೈ ಸೇರದ ಕಾರಣ ಕೃಷಿ ಚಟುವಟಿಕೆ, ಕುಟುಂಬ ನಿರ್ವಹಣೆ, ಸಾಲ ತೀರಿಸುವುದು ಕಷ್ಟವಾಗಿದೆ.

ರಾಜ್ಯ ಸರ್ಕಾರವು ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಮೂಲಕ ಜಿಲ್ಲೆಯಲ್ಲಿ ಒಟ್ಟು 44,159 ರೈತರಿಂದ ಎಂಎಸ್‌ಪಿ ದರದಲ್ಲಿ 10,36,096 ಕ್ವಿಂಟಾಲ್ ರಾಗಿಯನ್ನು ಖರೀದಿ ಮಾಡಲಾಗಿದೆ. ಇದರ ಒಟ್ಟು ಮೊತ್ತ 535 ಕೋಟಿ 52 ಲಕ್ಷ 34 ಸಾವಿರದ 339 ರೂ. ಆಗಿದೆ. ಆದರೆ, ಅರ್ಧದಷ್ಟು ರೈತರಿಗೆ ಮಾತ್ರ ಹಣವನ್ನು ನೀಡಲಾಗಿದೆ. ಇನ್ನೂ ಅರ್ಧದಷ್ಟು ಮಂದಿಯ ಬ್ಯಾಂಕ್ ಖಾತೆಗೆ ಹಣವೇ ಬಂದಿಲ್ಲವೆಂದು ರೈತರು ಆರೋಪಿಸಿದ್ದಾರೆ.

### ಪ್ರಮುಖಾಂಶ

- ಒಟ್ಟು 44,159 ರೈತರಿಂದ ರಾಗಿ ಖರೀದಿ
- ಒಟ್ಟು 10,36,096 ಕ್ವಿಂಟಾಲ್ ಸಂಗ್ರಹ
- ಒಟ್ಟು ಮೊತ್ತ 535 ಕೋಟಿ 52 ಲಕ್ಷರೂ.



ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಪ್ರಶ್ನಿದರೆ, ಜಿಲ್ಲೆಯಲ್ಲಿ 15 ಸಾವಿರಕ್ಕೂ ಹೆಚ್ಚು ರೈತರ 150 ಕೋ.ರೂ. ಬಾಕಿ ಇದೆ. ಕೇಂದ್ರ ಸರ್ಕಾರ ಇನ್ನೂ ಹಣ ಬಿಡುಗಡೆ ಮಾಡಿಲ್ಲ, ಈಗಾಗಲೇ ರಾಜ್ಯ ಸರ್ಕಾರದಿಂದ ನೀಡಬೇಕಾದ ಹಣನ್ನು ಹಂತ ಹಂತವಾಗಿ ರೈತರ ಖಾತೆಗೆ ಪಾವತಿ ಮಾಡಲಾಗಿದೆ. ಕೇಂದ್ರದಿಂದ ಹಣ ಬಂದ ತಕ್ಷಣ ನೀಡಲಾಗುವುದೆಂದು ಹೇಳಿ ಕೈತೊಳೆದು ಕೊಳ್ಳುತ್ತಿದ್ದಾರೆ.

2025-26ನೇ ಸಾಲಿನಲ್ಲಿ ಕ್ವಿಂಟಾಲ್‌ಗೆ 4,886ರೂ. ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿದ್ದು, ಕಳೆದ 5 ವರ್ಷಗಳಿಗಿಂತ ಶೇ.35 ರಷ್ಟು ಎಂಎಸ್‌ಪಿ ದರ ಹೆಚ್ಚಳ ಮಾಡಿದ್ದರಿಂದ ರೈತರಿಗೆ ಸಾಕಷ್ಟು ಅನುಕೂಲವಾಗಿತ್ತು. ಹೀಗಾಗಿ ಜಿಲ್ಲೆಯ 44 ಸಾವಿರಕ್ಕೂ ಹೆಚ್ಚು ರೈತರು ನೋಂದಾಯಿಸಿಕೊಂಡು ಸರ್ಕಾರದ ನಿಯಮಾನುಸಾರ ತಾವು ಬೆಳೆದ ರಾಗಿಯನ್ನು ಮಾರಾಟ ಮಾಡಿದ್ದರು. ಆದರೆ, ಬೆಂಬಲ ಬೆಲೆ ಘೋಷಣೆ ಮಾಡಿ, ರಾಗಿ ಖರೀದಿ ಮಾಡಿದ ಸರ್ಕಾರ ತಿಂಗಳುಗಳೇ ಕಳೆದರೂ ರೈತರ ಖಾತೆಗೆ ಹಣ ನೀಡದಿರುವುದರಿಂದ ರೈತರು ಹೋರಾಟದ ಹಾದಿ ಹಿಡಿಯುವಂತಾಗಿದೆ.

**ಬಂಡವಾಳವಿಲ್ಲದೆ ಪರದಾಟ**

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಮಾಡಿ 3 ತಿಂಗಳುಗಳಾದರೂ ಬ್ಯಾಂಕ್ ಖಾತೆಗೆ ಹಣ ಜಮೆಯಾಗಿಲ್ಲ. ಮುಂಗಾರು ಮಳೆ ಕೊರತೆಯಿಂದ ಈಗಾಗಲೇ ಸಂಕಷ್ಟದಲ್ಲಿರುವ ರೈತರು ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ಬಂಡವಾಳವಿಲ್ಲದೆ ಪರದಾಡುತ್ತಿದ್ದಾರೆ. ಗೊಬ್ಬರ, ಬೀಜ, ಕೂಲಿ ವೆಚ್ಚ ಸೇರಿ ದೈನಂದಿನ ಖರ್ಚುಗಳನ್ನು ನಿಭಾಯಿಸುವುದೂ ಕಷ್ಟವಾಗಿದೆ ಎಂದು ರೈತರು ಆಕ್ರೋಶ ಹೊರ ಹಾಕಿದ್ದಾರೆ.

ರಾಜ್ಯ ಸರ್ಕಾರವು ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಮೂಲಕ ಮೇ ತಿಂಗಳವರೆಗೆ ಖರೀದಿ ಕೇಂದ್ರಗಳ ಮೂಲಕ ಬೆಂಬಲ ಬೆಲೆಯಲ್ಲಿ ರಾಗಿಯನ್ನು ಖರೀದಿ ಮಾಡಿತ್ತು. ಆದರೆ, ಜುಲೈ ಬಂದರೂ ಹಣ ಪಾವತಿಯಾಗಿಲ್ಲ.

**ಪ್ರತಿಭಟನೆ ಹಾದಿ ಹಿಡಿದಿರುವ ರೈತರು**

ಬೆಳೆ ಮಾರಾಟ ಮಾಡಿದ ನಂತರ ನಿಗದಿತ ಅವಧಿಯಲ್ಲೇ ಹಣ ಪಾವತಿಯಾಗಬೇಕು. ಇಲ್ಲವಾದರೆ ಕೃಷಿ ಚಟುವಟಿಕೆಗಳು ಸಂಪೂರ್ಣ ಅಸ್ತವ್ಯಸ್ತವಾಗುತ್ತವೆ. ಹಣ ಬಿಡುಗಡೆಗೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಜಿಲ್ಲಾದ್ಯಂತ ಪ್ರತಿಭಟನೆ ನಡೆಸಬೇಕಾದ ಅನಿವಾರ್ಯತೆ ಎದುರಾಗಲಿದೆ. ಮೊದಲ ಹಂತವಾಗಿ ಗುರುವಾರ ಅರಸೀಕೆರೆ ಹಾಗು ಹಾಸನದಲ್ಲಿ ರೈತರು ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

> ಬರದ ಭೀತಿ, ಮಳೆಯ ಅನಿಶ್ಚಿತತೆ ಹಾಗು ಕೃಷಿ ವೆಚ್ಚ ಏರಿಕೆಯಿಂದ ಸಂಕಷ್ಟದಲ್ಲಿರುವ ರೈತರಿಗೆ ಬೆಂಬಲ ಬೆಲೆಯ ಹಣವೇ ಆಸರೆಯಾಗಬೇಕಿತ್ತು. ಹೊರಗಿನ ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ವ್ಯಾಪಾರಸ್ಥರು ಕೇಳುತ್ತಾರೆಂದು ನಾವು ಸರ್ಕಾರಕ್ಕೆ ಮಾರಾಟ ಮಾಡಿದರೆ, ಹಣ ಪಾವತಿಯಲ್ಲಿ ವಿಳಂಬವಾಗುತ್ತಿದೆ. ನಮ್ಮ ಸ್ಥಿತಿ ಅತಂತ್ರವಾಗಿದೆ. ಮಕ್ಕಳ ಶಾಲಾ, ಕಾಲೇಜು ಶುಲ್ಕ ಪಾವತಿಗೆ ನೆರವಾಗುವ ನಿರೀಕ್ಷೆಯಲ್ಲಿ ಇದ್ದೆವು. ಹೀಗಾದರೆ ಹೇಗೆ ನಿಭಾಯಿಸುವುದೋ ತಿಳಿಯುತ್ತಿಲ್ಲ.
>
> -ಯೋಗೇಶ್, ರೈತ ಸಂಘದ ಮುಖಂಡ

# ಸೋನಂ ವಾಂಗ್ಚುಕ್‌ಗೆ ಜನಪರ ಸಂಘಟನೆಗಳ ಬೆಂಬಲ

• ಪ್ರಜೋದಯ ವರದಿ

**ಹಾಸನ:** ಸಾಮಾಜಿಕ ಹೋರಾಟಗಾರ ಸೋನಂ ವಾಂಗ್ಚುಕ್ ಅವರ ಅಮರಣಾಂತ ಉಪವಾಸ ಸತ್ಯಾಗ್ರಹ ಬೆಂಬಲಿಸಿ ಜಿಲ್ಲೆಯ ಜನಪರ-ಪರಿಸರ ಸಂಘಟನೆಗಳ ಮುಖಂಡರು ಮೌನ ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ಮೂಲಕ ಗುರುವಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಹಸಿರು ಭೂಮಿ ಪ್ರತಿಷ್ಠಾನದ ಸಂಸ್ಥಾಪಕ ಆರ್.ಪಿ. ವೆಂಕಟೇಶ್‌ಮೂರ್ತಿ ಅವರು ಮಾತನಾಡಿ, ನೀಟ್ ಪರೀಕ್ಷೆಯ ಅವ್ಯವಸ್ಥೆಗೆ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕೆಂಬ ಬೇಡಿಕೆ ಮುಂದಿಟ್ಟು ನಡೆಯುತ್ತಿರುವ ಸತ್ಯಾಗ್ರಹಕ್ಕೆ ವಾಂಗ್ಚುಕ್ ಬೆಂಬಲ



ಸೂಚಿಸಿರುವುದು ನ್ಯಾಯಸಮ್ಮತವಾಗಿದೆ. ಕೇಂದ್ರ ಸರ್ಕಾರ ಹೋರಾಟವನ್ನು ನಿರ್ಲಕ್ಷಿಸಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ತಿಳಿಸಿದರು.

ದೆಹಲಿಯ ಜಂತರ್ ಮಂತರ್‌ನಲ್ಲಿ ಸೋನಂ ವಾಂಗ್ಚುಕ್ ಅವರು ನ್ಯಾಯಯುತ ಬೇಡಿಕೆ ಮುಂದಿಟ್ಟು ನಡೆಸುತ್ತಿರುವ ಅಮರಣಾಂತ ಉಪವಾಸ ಸತ್ಯಾಗ್ರಹ ದೇಶಾದ್ಯಂತ ಗಮನ ಸೆಳೆದಿದೆ. ಅವರ ಆರೋಗ್ಯ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದ್ದರೂ, ಕೇಂದ್ರ ಸರ್ಕಾರ ಯಾವುದೇ ಸ್ಪಂದನೆ ತೋರದಿರುವುದು ಅತ್ಯಂತ ವಿಷಾದನೀಯ ಎಂದರು.

ನೀಟ್ ಪರೀಕ್ಷೆ ಅವ್ಯವಸ್ಥೆ ಮತ್ತು ಅಕ್ರಮಗಳಿಂದ ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಅನಿಶ್ಚಿತತೆಯಲ್ಲಿದೆ. ಪರೀಕ್ಷಾ ವ್ಯವಸ್ಥೆಯ ಮೇಲಿನ ವಿಶ್ವಾಸ ಕುಸಿದಿದ್ದು, ಅನೇಕ ವಿದ್ಯಾರ್ಥಿಗಳು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದಾರೆ. ಕೆಲವರು ಆತ್ಮಹತ್ಯೆಗೂ ಶರಣಾಗಿರುವುದು ದೇಶದ ದೊಡ್ಡ ದುರಂತ. ತಮ್ಮ ಮಕ್ಕಳ ಉನ್ನತ ಶಿಕ್ಷಣದ ಕನಸು ಕಂಡಿದ್ದ ಪೋಷಕರು ಕೂಡ ತೀವ್ರ ನೋವು ಅನುಭವಿಸುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಂತಿಯುತ ಹಾಗೂ ಅಹಿಂಸಾತ್ಮಕ ಹೋರಾಟಗಳಿಗೆ ಸರ್ಕಾರ ಸ್ಪಂದಿಸುವುದು ಅದರ ಕರ್ತವ್ಯವಾಗಿದೆ. ಗಾಂಧಿವಾದದ ಮಾರ್ಗದಲ್ಲಿ

» ನಾಲ್ಕನೇ ಪುಟದಲ್ಲಿ

# ಜು.18 ರಂದು ಜನಸ್ಪಂದನಾ ಸಭೆ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಕುಂದುಕೊರತೆ ಸಭೆಯನ್ನು ಜು.18 ರಂದು ಬೆಳಿಗ್ಗೆ 10 ಗಂಟೆಗೆ ದುದ್ದ ಹೋಬಳಿ, ದುದ್ದ ಗ್ರಾಮದ ಆರ್.ಎಸ್.ಸರ್ಕಾರಿ ಪ್ರೌಢಶಾಲೆ ಆಟದ ಮೈದಾನದಲ್ಲಿ ಆಯೋಜಿಸಲಾಗಿದೆ.

ಸದರಿ ದಿನದಂದು ರೈತರು, ಸಾರ್ವಜನಿಕರು ಖುದ್ದು ಹಾಜರಾಗಿ ತಮ್ಮ ಸಮಸ್ಯೆಗಳು, ವಿವಿಧ ಇಲಾಖೆಗಳಲ್ಲಿ ದೊರೆಯಬೇಕಾದ ಸೌಲಭ್ಯಗಳು ನಿಗದಿತ ಅವಧಿಯೊಳಗೆ ದೊರೆಯದೇ ಇದ್ದಾಗ, ತಮ್ಮ ಅಹವಾಲು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಾಲ್ಲೂಕು ತಹಸೀಲ್ದಾರ್ ತಿಳಿಸಿದ್ದಾರೆ.

# ಪ್ರೇಮ ವಿವಾಹ ಘರ್ಷಣೆ : ಪ್ರತ್ಯೇಕ 5 ಪ್ರಕರಣ ದಾಖಲು

• ಪ್ರಜೋದಯ ವರದಿ

**ಹಾಸನ :** ಬೇಲೂರಿನಲ್ಲಿ ಪ್ರೇಮ ವಿವಾಹ ಸಂಬಂಧ ನಡೆದ ಘರ್ಷಣೆಯಲ್ಲಿ ಐದು ಪ್ರಕರಣಗಳು ದಾಖಲಾಗಿದ್ದು, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಾಹವಾಗಿರುವ ಪ್ರೇಮಿಗಳಿಬ್ಬರು ವಯಸ್ಕರಾಗಿರುವುದರಿಂದ ಅವರಿಗೆ ಪೊಲೀಸ್ ರಕ್ಷಣೆ ನೀಡಲಾಗಿದೆ. ಎರಡು ಗುಂಪುಗಳ ನಡುವಿನ ಜಗಳದಲ್ಲಿ ಪೊಲೀಸರಿಗೂ ಗಾಯಗಳಾಗಿಲ್ಲ. ಸೂಕ್ತ ಸಮಯಕ್ಕೆ ಸ್ಥಳಕ್ಕೆ ತೆರಳಿ ಕ್ರಮ ಕೈಗೊಂಡಿದ್ದಾರೆ ಎಂದರು.

ಈ ಪ್ರಕರಣದಲ್ಲಿ ಪೊಲೀಸರು 2 ಸುಮೋಟೋ ಪ್ರಕರಣ ಹಾಗು ಮೂರು ಪರ-ವಿರೋಧ, ಹಲ್ಲೆಗೊಳಗಾದವರು ನೀಡಿದ ದೂರಿನ ಮೇರೆಗೆ ಒಟ್ಟು ಐದು ಪ್ರಕರಣಗಳು ಬೇಲೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿವೆ. ಬೇಲೂರು ಪೊಲೀಸ್ ಠಾಣೆ ಪಿಎಸ್‌ಐ ಶಿವನಗೌಡ ಪಾಟೀಲ ಅವರು ನೀಡಿದ ದೂರಿನ ಮೇರೆಗೆ 20 ಜನರ ಮೇಲೆ ಸುಮೋಟೋ ಪ್ರಕರಣ ದಾಖಲಾಗಿದೆ. ಎಎಸ್‌ಐ ಸೋಮಶೇಖರಗೌಡ ನೀಡಿದ ದೂರಿನ ಮೇರೆಗೆ ರೋಷನ್, ಆಸಿಫ್, ಹಾಶಿಮ್, ಶಹಬಾಸ್, ಜಬಿ, ಜಮೀರ್ ಹಾಗು 50 ಜನರ ಮೇಲೆ ಸುಮೋಟೋ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.


- 95ಕ್ಕೂ ಹೆಚ್ಚು ಜನರ ವಿರುದ್ಧ ದೂರು
- ಪೊಲೀಸರಿಂದ ಎರಡು ಸುಮೋಟೋ ಕೇಸ್

ಹಲ್ಲೆಗೊಳಗಾದ ತೌಶಾದ್ ನೀಡಿದ ದೂರಿನ ಮೇರೆಗೆ ಅಬ್ರಾರ್, ಯಾಸಿನ್ ಹಾಗು ಇತರೆ ಇಬ್ಬರ ಮೇಲೆ ಪ್ರಕರಣ ದಾಖಲಾಗಿದೆ. ಗಾಯಾಳು ನಿಡಗೋಡು ಗ್ರಾಮದ ಆಶಿಮ್ ನೀಡಿದ ದೂರಿನ ಮೇರೆಗೆ ಸಮದ್, ಫರ್ವಿಜ್, ಮುಕ್ರಮ್, ಅನಿಲ್, ಆರೋಫ್, ಇಮ್ತಿಯಾಜ್, ಅಬ್ರಾರ್, ಖಲೀಲ್, ಮನ್ಸೂರ್, ಶಾಬಾಜ್ ರೋಷನ್ ಹಾಗು ಇತರೆ 15 ಜನರ ವಿರುದ್ಧ ಹಾಗು ರೋಷನ್ ನೀಡಿದ ದೂರಿನ ಮೇರೆಗೆ ಆಶಿಮ್, ಆಸಿಫ್, ಮೊಹಮದ್, ತೌಶಾದ್ ಹಾಗು ಇತರೆ 11 ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು, ಇವರಲ್ಲಿ ಮೂವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದರು.

# ಎಂ.ಕೆ.ಪ್ರಾಣೇಶ್ ಸದಸ್ಯತ್ವ ರದ್ದು

• ಪ್ರಜೋದಯ ವರದಿ

**ನವದೆಹಲಿ:** ವಿಧಾನ ಪರಿಷತ್ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಆಯ್ಕೆ ರದ್ದು ಗೊಳಿಸಿದ್ದ ಹೈ ಕೋರ್ಟ್



ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದ್ದು, ಪ್ರಾಣೇಶ್ ಸದಸ್ಯತ್ವ ರದ್ದಾಗಿದೆ.

ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಪ್ರಾಣೇಶ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಯಿತು. ವಿಧಾನ ಪರಿಷತ್ ಚುನಾವಣೆಯಲ್ಲಿ ನಾಮ ನಿರ್ದೇಶಿತ ಸದಸ್ಯರಿಗೆ ಮತ ಚಲಾಯಿಸುವ ಹಕ್ಕಿಲ್ಲವೆಂದು ಹೈಕೋರ್ಟ್ ತೀರ್ಪು ನೀಡಿ, ಅವರ ಮತಗಳನ್ನು ಹೊರಗಿಟ್ಟು ಮತಗಳ ಮರು ಎಣಿಕೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಹೈಕೋರ್ಟ್ ನಿರ್ದೇಶನ ನೀಡಿತ್ತು.

# ರಾಜ್ಯ ಸರ್ಕಾರದ ವಿರುದ್ಧ ರೈತ ಸಂಘದಿಂದ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಮುಂಗಾರು ಮಳೆ ಕೊರತೆ, ಬೆಳೆಗಳಿಗೆ ರೋಗ ಬಾಧೆಯಿಂದ ಅನ್ನದಾತರು ಸಂಕಷ್ಟ ಎದುರಿಸುತ್ತಿದ್ದರೂ ಪರಿಹಾರ ಕ್ರಮ ಕೈಗೊಳ್ಳದೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿ ರಾಜ್ಯ ರೈತ ಸಂಘ-ರೈತ ಶಕ್ತಿ ಬಣದ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಗುರುವಾರ ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಎನ್.ಆರ್.ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ವಿರುದ್ಧ ಧಿಕ್ಕಾರ ಕೂಗಿದರು. ನಂತರ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.



ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಒಂದು ತಿಂಗಳು ಕಳೆದಿದ್ದರೂ ಕೃಷಿ ಸಚಿವರನ್ನೇ ನೇಮಕ ಮಾಡಿಲ್ಲ. ಈ ಅವಧಿಯಲ್ಲಿ ರಸಗೊಬ್ಬರ, ಬಿತ್ತನೆ ಬೀಜ, ಕಾಲುವೆಗಳಿಗೆ ನೀರು ಹರಿಸುವುದು ಸೇರಿ ಕೃಷಿ ಇಲಾಖೆಗೆ ಕಾರ್ಯಭಾರ ಹೆಚ್ಚಿರುತ್ತದೆ. ಯಾರೂ ಜವಾಬ್ದಾರಿ ವಹಿಸಿಕೊಳ್ಳದ ಹಿನ್ನಲೆಯಲ್ಲಿ ಅಧಿಕಾರಿಗಳದ್ದೇ ಕಾರುಬಾರು ನಡೆಯುತ್ತಿದೆ ಎಂದು ಆರೋಪಿಸಿದರು.


ರೈತರಿಂದ ಬೆಂಬಲ ಬೆಲೆಯಡಿ ರಾಗಿ ಖರೀದಿಸಿ 3 ತಿಂಗಳಾದರೂ ಹಣ ಪಾವತಿಯಾಗಿಲ್ಲ. ನೆರೆ ಹಾವಳಿಗೆ ತುತ್ತಾದ ತೆಂಗಿನ ಮರ ಹಾಗು ಅಡಿಕೆ ಬೆಳೆಗೆ ಒಂದು ವರ್ಷವಾದರೂ ಪರಿಹಾರ ಸಿಕ್ಕಿಲ್ಲ. ಮೆಕ್ಕೆಜೋಳ ಬಿಳಿಸುಳಿ ರೋಗದಿಂದ ಸಂಪೂರ್ಣ ಹಾನಿಗೀಡಾಗಿದ್ದು, ಸರ್ವೆ ನಡೆಸಿ ಪರಿಹಾರ ನೀಡುವಲ್ಲಿ ಆಡಳಿತ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದರೆ ರಾಜ್ಯದ ಜನರಿಗೆ ಒಳ್ಳೆಯದಾಗುತ್ತದೆಂಬ ನಿರೀಕ್ಷೆ ಇತ್ತು. ಆದರೆ, ಟೌನ್‌ಶಿಪ್ ನಿರ್ಮಾಣದ ಹೆಸರಿನಲ್ಲಿ ಬಿಡದಿಯ ನೂರಾರು ಎಕರೆ ಸ್ವಾಧೀನಕ್ಕೆ ಮುಂದಾಗುವ ಮೂಲಕ ಅನ್ನದಾತರ ಶಾಪಕ್ಕೆ ಗುರಿಯಾಗುತ್ತಿದ್ದಾರೆ. ದೇವನಹಳ್ಳಿ, ಬಿಡದಿ ಬಳಿಕ ಹಾಸನದ ಜಮೀನಿಗೂ ಕನ್ನ ಹಾಕಿದ್ದಾರೆ. ಕೃಷಿಕರಿಗೆ ಅನುಕೂಲ ಮಾಡಿಕೊಡಬೇಕಿರುವ ಸರ್ಕಾರ ಅನ್ನದಾತರನ್ನೇ ಬೀದಿಗೆ ತಳ್ಳುತ್ತಿರುವುದು ಖಂಡನೀಯ ಎಂದರು.

**ಸಭೆ ನಡೆಸದ ಉಸ್ತುವಾರಿ ಸಚಿವರು**

ಹಾಸನಕ್ಕೆ ತಾತ್ಕಾಲಿಕ ಉಸ್ತುವಾರಿ ಸಚಿವರನ್ನಾಗಿ ಕೃಷ್ಣಬೈರೇಗೌಡ ಅವರನ್ನು ನೇಮಕ ಮಾಡಲಾಗಿದೆ. ಆದರೆ, ಅವರು ಜಿಲ್ಲೆಗೆ ಭೇಟಿ ನೀಡಿಲ್ಲ, ಮಳೆ ಕೊರತೆಯಿಂದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿದೆ. ಮೇವಿಲ್ಲದೆ ಜಾನುವಾರುಗಳು ತೊಂದರೆಗೀಡಾಗಿವೆ. ಕೆರೆಕಟ್ಟೆ, ಜಲಾಶಯಗಳಲ್ಲಿ ನೀರಿಲ್ಲದೆ ಬತ್ತಿವೆ. ಇಂತಹ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಜನರಿಗೆ ಧೈರ್ಯ ಹೇಳಬೇಕಿದ್ದ ಸಚಿವರು ಬೆಂಗಳೂರಿನಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆಗಷ್ಟೇ ಸೀಮಿತರಾಗಿದ್ದಾರೆ. ತಕ್ಷಣ ಜಿಲ್ಲೆಯ ರೈತರ ಸಮಸ್ಯೆಗೆ ಸ್ಪಂದಿಸದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಿದರು. ಸಂಘದ ರಾಜ್ಯಾಧ್ಯಕ್ಷ ದಯಾನಂದ ನಾಗೇನಹಳ್ಳಿ, ಮಹಿಳಾ ಘಟಕದ ಅಧ್ಯಕ್ಷೆ ಹೇಮಾ, ಯುವ ಘಟಕದ ಅಧ್ಯಕ್ಷ ನಿತಿನ್‌ಗೌಡ, ಜಂಟಿ ಕಾರ್ಯದರ್ಶಿ ಲೋಕೇಶ್ ಮತ್ತಿತರರಿದ್ದರು.

# ಇಂದು ನಾದ ದೇವತೆಯ ಸ್ಮರಣಾಂಜಲಿ




• ಪ್ರಜೋದಯ ವರದಿ

**ಹಾಸನ:** ಖ್ಯಾತ ಹಿನ್ನೆಲೆ ಗಾಯಕಿ ಡಾ. ಎಸ್.ಜಾನಕಿ ಅವರ ಸ್ಮರಣಾರ್ಥ ಹಾಸನಾಂಬ ಕಲಾಕ್ಷೇತ್ರದಲ್ಲಿ ಜು.17ರ ಶುಕ್ರವಾರ ಸಂಜೆ 5.30 ಗಂಟೆಗೆ ನಾದ ದೇವತೆಯ ಸ್ಮರಣಾಂಜಲಿ ಅಮರ ದನಿ-ಅನಂತ ನೆನಪು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಎಸ್.ಜಾನಕಿ ಅವರು ಆಂಧ್ರ ಪ್ರದೇಶದವರಾದರೂ ಕನ್ನಡಿಗರಾಗಿಯೇ ಚಿರಪರಿಚಿತರಾಗಿದ್ದಾರೆ. 16ಕ್ಕೂ ಹೆಚ್ಚು ಭಾಷೆಗಳಲ್ಲಿ 20 ಸಾವಿರಕ್ಕೂ ಅಧಿಕ ಹಾಡುಗಳಿಗೆ ಧ್ವನಿಯಾಗುವ ಮೂಲಕ ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ವರನಟ ಡಾ.ರಾಜಕುಮಾರ್ ಅವರ ಬಹುತೇಕ ಸಿನಿಮಾಗಳಿಗೆ ಜಾನಕಿ ಧ್ವನಿಯಾಗಿದ್ದಾರೆಂದರು.

ಶುಕ್ರವಾರದ ಅರ್ಥಪೂರ್ಣ ಕಾರ್ಯಕ್ರಮಕ್ಕೆ ರೋಟರಿ 3182 ವಲಯ 9ರ ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಡಾ.ರಾಜಕುಮಾರ್ ಅಭಿಮಾನಿಗಳ ಸಂಘ, ವಿದ್ಯಾನಗರ ಕುವೆಂಪು ಯುವಕರ ಬಳಗ, ಶ್ರೀ ವಿದ್ಯಾ ಗಣಪತಿ ಗೆಳೆಯರ ಬಳಗ

» ನಾಲ್ಕನೇ ಪುಟದಲ್ಲಿ

E-mail : prajodayahsn@gmail.com

ಪ್ರಜೋದಯ

17 ಜುಲೈ 2026 ಶುಕ್ರವಾರ

# ಸಿನಿ ಪ್ರಜಾ



# ತೆರೆಗೆ ಬರಲಿವೆ ಸಾಲು ಸಾಲು ಬಯೋಪಿಕ್ ಸಿನಿಮಾಗಳು

ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಪಾತ್ರದಲ್ಲಿ ರಾಜ್‌ಕುಮಾರ್ ರಾವ್ ಅವರ ಮೊದಲ ಲುಕ್ ಸದ್ದು ಮಾಡುತ್ತಿದ್ದಂತೆ, ಆರ್ ಮಾಧವನ್, ಶ್ರದ್ಧಾ ಕಪೂರ್, ಧನುಷ್ ಮತ್ತು ಇನ್ನೂ ಹೆಚ್ಚಿನವರು ಬಯೋಪಿಕ್‌ವನ್ನು ತೆರೆಗೆ ತರಲು ಸಜ್ಜಾಗುತ್ತಿದ್ದಾರೆ. ಇವುಗಳಲ್ಲದೆ, ಕ್ರಿಕೆಟಿಗ ಯುವರಾಜ್ ಸಿಂಗ್ ಮತ್ತು ಪ್ರಸಿದ್ಧ ನಟರಾದ ಪರ್ವೀನ್ ಬಾಬಿ, ಮಧುಬಾಲಾ ಮತ್ತು ಮೀನಾ ಕುಮಾರಿ ಅವರ ಜೀವನ ಚರಿತ್ರೆಯ ಕುರಿತಾದ ಚಲನಚಿತ್ರಗಳನ್ನು ಸಹ ಘೋಷಿಸಲಾಗಿದೆ. ಆದಾಗ್ಯೂ, ಪಾತ್ರವರ್ಗ, ನಿರ್ಮಾಣ ವಿವರಗಳು ಮತ್ತು ಬಿಡುಗಡೆ ದಿನಾಂಕಗಳ ಕುರಿತು ಹೆಚ್ಚಿನ ಅಪ್‌ಡೇಟ್‌ಗಳು ಇನ್ನೂ ನಿರೀಕ್ಷೆಯಲ್ಲಿವೆ.

ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಪಾತ್ರದಲ್ಲಿ ರಾಜ್‌ಕುಮಾರ್ ರಾವ್ ಅವರ ಮೊದಲ ಲುಕ್ ಸದ್ದು ಮಾಡುತ್ತಿದ್ದಂತೆ, ಆರ್ ಮಾಧವನ್, ಶ್ರದ್ಧಾ ಕಪೂರ್, ಧನುಷ್ ಮತ್ತು ಇನ್ನೂ ಹೆಚ್ಚಿನವರು ಬಯೋಪಿಕ್‌ವನ್ನು ತೆರೆಗೆ ತರಲು ಸಜ್ಜಾಗುತ್ತಿದ್ದಾರೆ.

**ಜಿಡಿಎನ್**

ಭಾರತದ ಎಡಿಸನ್ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಪ್ರಸಿದ್ಧ ಭಾರತೀಯ ಸಂಶೋಧಕ ಗೋಪಾಲಸ್ವಾಮಿ ದೊರೈಸ್ವಾಮಿ ನಾಯ್ಡು ಅವರ ಜೀವನವನ್ನು ಆಧರಿಸಿದ ಈ ಚಿತ್ರದಲ್ಲಿ ಆರ್. ಮಾಧವನ್ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ.

ಕೃಷ್ಣಕುಮಾರ್ ರಾಮಕುಮಾರ್ ನಿರ್ದೇಶಿಸಿದ ಈ ಸಿನಿಮಾ ವಿಜ್ಞಾನ, ತಂತ್ರಜ್ಞಾನ ಮತ್ತು ಸಾರ್ವಜನಿಕ ಸೇವೆಗೆ ನೀಡಿದ ಮಹತ್ವದ ಕೊಡುಗೆ ಇರಲಿದೆ.

ಈ ಚಿತ್ರದಲ್ಲಿ ಜಯರಾಮ್, ಸತ್ಯರಾಜ್, ಪ್ರಿಯಾಮಣಿ ಮತ್ತು ದುಷಾರ ವಿಜಯನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಅಧಿಕೃತ ಬಿಡುಗಡೆ ದಿನಾಂಕವನ್ನು ಇನ್ನೂ ಘೋಷಿಸಲಾಗಿಲ್ಲ.

**ಇಟಾ**

ಎರಡು ವರ್ಷಗಳ ವಿರಾಮದ ನಂತರ ದೊಡ್ಡ ಪರದೆಗೆ ಮರಳುತ್ತಿರುವ ಶ್ರದ್ಧಾ ಕಪೂರ್, ಪ್ರಸಿದ್ಧ ಮರಾಠಿ ಜಾನಪದ ಕಲಾವಿದೆ ವಿಠಬಾಯಿ ಭಾವು ಮಾಂಗ್ ನಾರಾಯಣಗಾಂವ್ಕರ್ ಪಾತ್ರದಲ್ಲಿ ನಟಿಸಿದ್ದಾರೆ. ಲಕ್ಷ್ಮಣ್ ಉಟೇಕರ್ ನಿರ್ದೇಶಿಸಿದ ಈ ಚಿತ್ರವು ಇದು ಆಗಸ್ಟ್ 28 ರಂದು ದೊಡ್ಡ ಪರದೆಯ ಮೇಲೆ ಬಿಡುಗಡೆಯಾಗಲಿದೆ.

**ಪ್ರಹಾರ್: ದಿ ಉಜ್ವಲ್ ನಿಕಮ್ ಸ್ಟೋರಿ**

ರಾಜ್‌ಕುಮಾರ್ ರಾವ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರವು, ಭಾರತದ ಖ್ಯಾತ ಪಬ್ಲಿಕ್ ಪ್ರಾಸಿಕ್ಯೂಟರ್ ಉಜ್ವಲ್ ನಿಕಮ್ ಅವರ ಪ್ರಯಾಣ ಕುರಿತು ಇದೆ. ಅವಿನಾಶ್ ಅರುಣ್ ನಿರ್ದೇಶಿಸಿದ ಈ ಜೀವನಚರಿತ್ರೆಯ ನಾಟಕದಲ್ಲಿ ವಾಮಿಕಾ ಗಬ್ಬಿ, ಜೈದೀಪ್ ಅಹ್ಲಾವತ್ ಮತ್ತು ಸಿಕಂದರ್ ಖೇರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರವು ಆಗಸ್ಟ್ 7 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಅಬ್ದುಲ್ ಕಲಾಂ ಜೀವನ ಚರಿತ್ರೆ**

ಭಾರತದ ಮಾಜಿ ರಾಷ್ಟ್ರಪತಿ ಮತ್ತು ವಿಜ್ಞಾನಿ ಡಾ. ಎಪಿಜೆ ಅಬ್ದುಲ್ ಕಲಾಂ ಅವರ ಜೀವನ ಚರಿತ್ರೆಯ ಕುರಿತಾದ ಒಂದು ಜೀವನ ಚರಿತ್ರೆ, ನಿರ್ಮಾಣ ಹಂತದಲ್ಲಿದೆ, ಇದರಲ್ಲಿ ಧನುಷ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ ಮತ್ತು ಓಂ ರಾವತ್ ನಿರ್ದೇಶಕರ ಟೋಪಿ ಧರಿಸಿದ್ದಾರೆ. ಆತ್ಮಚರಿತ್ರೆ ವಿಂಗ್ಸ್ ಆಫ್ ಫೈರ್‌ನಿಂದ ಸ್ಫೂರ್ತಿ ಪಡೆದಿದೆ. ಇದು ಈ ವರ್ಷದ ಕೊನೆಯಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ.

**ಮಾ ವಂದೇ**

ಪ್ರಧಾನಿ ನರೇಂದ್ರ ಮೋದಿಯವರ ಜೀವನ ಮತ್ತು ಪ್ರಯಾಣವನ್ನು ವಿವರಿಸುವ ಈ ಕ್ರಾಂತಿ ಕುಮಾರ್ ಸಿಎಚ್ ನಿರ್ದೇಶಿಸಿದ ಈ ಚಿತ್ರದಲ್ಲಿ ಉನ್ನಿ ಮುಕುಂದನ್ ಪ್ರಮುಖ ಪಾತ್ರದಲ್ಲಿದ್ದಾರೆ. ಅಧಿಕೃತ ಬಿಡುಗಡೆ ದಿನಾಂಕವನ್ನು ಇನ್ನೂ ಘೋಷಿಸಲಾಗಿಲ್ಲ

**ವಿ ಶಾಂತಾರಾಮ್**

ಸಿದ್ಧಾಂತ್ ಚತುರ್ವೇದಿ ನಾಯಕನಾಗಿ ನಟಿಸಿರುವ ಈ ಚಿತ್ರವು ಭಾರತೀಯ ಚಿತ್ರರಂಗದ ಪ್ರವರ್ತಕರಲ್ಲಿ ಒಬ್ಬರಾದ ಪೌರಾಣಿಕ ಚಲನಚಿತ್ರ ನಿರ್ಮಾಪಕ ಶಾಂತಾರಾಮ್ ರಾಜಾರಾಮ್ ವಾಂಕುದ್ರೆ ಅವರ ಪ್ರಯಾಣವನ್ನು ವಿವರಿಸುತ್ತದೆ. ಅಭಿಜೀತ್ ಶಿರೀಶ್ ದೇಶಪಾಂಡೆ ಬರೆದು ನಿರ್ದೇಶಿಸಿರುವ ಈ ಚಿತ್ರದಲ್ಲಿ ತಮನ್ನಾ ಭಾಟಿಯಾ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

**ರಾಕೇಶ್ ಮಾರಿಯಾ ಜೀವನಚರಿತ್ರೆ**


ನಿರ್ದೇಶಕ ರೋಹಿತ್ ಶೆಟ್ಟಿ ಅವರ ಮುಂದಿನ ಇನ್ನೂ ಹೆಸರಿಡದ ಯೋಜನೆಯು ಮುಂಬೈನ ಮಾಜಿ ಪೊಲೀಸ್ ಆಯುಕ್ತ ರಾಕೇಶ್ ಮಾರಿಯಾ ಅವರ ಜೀವನವನ್ನು ಆಧರಿಸಿದೆ. ಇದರಲ್ಲಿ ಜಾನ್ ಅಬ್ರಹಾಂ ಮತ್ತು ತಮನ್ನಾ ಭಾಟಿಯಾ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ ಮತ್ತು ಈ ವರ್ಷದ ಕೊನೆಯಲ್ಲಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ.

**ಇಳಯರಾಜ**

ಪ್ರಸಿದ್ಧ ಸಂಗೀತ ಸಂಯೋಜಕ ಇಳಯರಾಜ ಅವರ ಜೀವನವನ್ನು ಆಧರಿಸಿದ ಈ ಚಿತ್ರದಲ್ಲಿ ಧನುಷ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಸಸಸ ಬಿಡುಗಡೆ ದಿನಾಂಕವನ್ನು ಇನ್ನೂ ದೃಢಪಡಿಸಲಾಗಿಲ್ಲ.

ಇವುಗಳಲ್ಲದೆ, ಕ್ರಿಕೆಟಿಗ ಯುವರಾಜ್ ಸಿಂಗ್ ಮತ್ತು ಪ್ರಸಿದ್ಧ ನಟರಾದ ಪರ್ವೀನ್ ಬಾಬಿ, ಮಧುಬಾಲಾ ಮತ್ತು ಮೀನಾ ಕುಮಾರಿ ಅವರ ಜೀವನ ಚರಿತ್ರೆಯ ಕುರಿತಾದ ಚಲನಚಿತ್ರಗಳನ್ನು ಸಹ ಘೋಷಿಸಲಾಗಿದೆ. ಆದಾಗ್ಯೂ, ಪಾತ್ರವರ್ಗ, ನಿರ್ಮಾಣ ವಿವರಗಳು ಮತ್ತು ಬಿಡುಗಡೆ ದಿನಾಂಕಗಳ ಕುರಿತು ಹೆಚ್ಚಿನ ನವೀಕರಣಗಳು ಇನ್ನೂ ನಿರೀಕ್ಷೆಯಲ್ಲಿವೆ.

# ಭಾರತದ ಬಹುನಿರೀಕ್ಷಿತ ಚಿತ್ರಗಳ ಪಟ್ಟಿಯಲ್ಲಿ ಟಾಕ್ಸಿಕ್ ಚಿತ್ರಕ್ಕೆ 1ನೇ ಸ್ಥಾನ



ಯಶ್ ನಟನೆಯ ಟಾಕ್ಸಿಕ್ ಸಿನಿಮಾ ಭಾರತೀಯ ಚಿತ್ರರಂಗದಲ್ಲಿ ದಾಖಲೆ ನಿರ್ಮಿಸುತ್ತಿದೆ. ನೆಗೆಟಿವ್ ಸುದ್ದಿಗಳು ಹರಿದಾಡುತ್ತಿದ್ದರೂ ಚಿತ್ರದ ಕ್ರೇಜ್ ಕಡಿಮೆಯಾಗಿಲ್ಲ. ಐಎಂಡಿಬಿ ಬಿಡುಗಡೆ ಮಾಡಿರುವ ಭಾರತದ ಅತ್ಯಂತ ನಿರೀಕ್ಷಿತ ಹೊಸ ಚಿತ್ರಗಳ ಪಟ್ಟಿಯಲ್ಲಿ ಟಾಕ್ಸಿಕ್ ಶೇಕಡಾ 47 ರಷ್ಟು ಮತಗಳೊಂದಿಗೆ ಅಗ್ರಸ್ಥಾನದಲ್ಲಿದೆ, ಇದು ಯಶ್ ಅವರ ಜಾಗತಿಕ ಜನಪ್ರಿಯತೆಯನ್ನು ತೋರಿಸುತ್ತದೆ.

ರಾಕಿಂಗ್ ಸ್ಟಾರ್ ಯಶ್ ನಟನೆಯ ಬಹು ನಿರೀಕ್ಷಿತ ಟಾಕ್ಸಿಕ್ ಸಿನಿಮಾ ಸದ್ಯ ಇಡೀ ಭಾರತೀಯ ಚಿತ್ರರಂಗದಲ್ಲೇ ಹೊಸ ದಾಖಲೆ ಬರೆಯುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಕೆಲವು ಮಾಧ್ಯಮ ಗಳಲ್ಲಿ ಈ ಚಿತ್ರದ ವಿರುದ್ಧ ಎಷ್ಟೇ ನೆಗೆಟಿವ್ ಸುದ್ದಿಗಳು ಹರಿದಾಡುತ್ತಿದ್ದರೂ, ಯಾವುದೂ ಚಿತ್ರದ ಕ್ರೇಜ್‌ಗೆ ಧಕ್ಕೆ ತರಲು ಸಾಧ್ಯವಾಗಿಲ್ಲ. ಸಿನಿಮಾ ರಿಲೀಸ್ ವಿಳಂಬ ಆದರೂ ಚಿತ್ರದ ಮೇಲಿರುವ ನಿರೀಕ್ಷೆ ಒಂದುಚೂರು ಕಮ್ಮಿ ಆಗಿಲ್ಲ ಎಂಬುದಕ್ಕೆ ಐಎಂಡಿಬಿ ಬಿಡುಗಡೆ ಮಾಡಿರುವ ಹೊಸ ಪಟ್ಟಿಯೇ ಸಾಕ್ಷಿ.

ಭಾರತದ ಅತ್ಯಂತ ನಿರೀಕ್ಷಿತ ಹೊಸ ಚಿತ್ರಗಳ ರಿಯಲ್-ಟೈಮ್ ಜನಪ್ರಿಯತೆಯ ಪಟ್ಟಿಯಲ್ಲಿ ಟಾಕ್ಸಿಕ್ ಮೊದಲ ಸ್ಥಾನವನ್ನು ಅಲಂಕರಿಸಿದೆ. ಭಾರತದ ಬೇರೆ ಯಾವ ದೊಡ್ಡ ಸಿನಿಮಾಗೂ ಇದರ ಹತ್ತಿರ ಸುಳಿಯಲು ಸಾಧ್ಯವಾಗಿಲ್ಲ ಎಂಬುದು ಚಿತ್ರದ ಹೆಚ್ಚುಗಾರಿಕೆ. ಇದು ಯಶ್ ಕ್ರೇಜ್‌ಗೆ ಹಿಡಿದ ಕೈಗನ್ನಡಿಯಾಗಿದೆ.

ಬಹುನಿರೀಕ್ಷಿತ ಸಿನಿಮಾ ಪಟ್ಟಿಯಲ್ಲಿ ಟಾಕ್ಸಿಕ್ ಸಿನಿಮಾ ಶೇಕಡಾ 47 ರಷ್ಟು ವೋಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಎರಡನೇ ಸ್ಥಾನದಲ್ಲಿರುವ ತಮಿಳು ನಟ ದಳಪತಿ ವಿಜಯ್ ನಟನೆಯ ಜನ ನಾಯಗನ್ ಸಿನಿಮಾ ಕೇವಲ ಶೇಕಡಾ 12.7 ರಷ್ಟು ವೋಟ್‌ಗಳನ್ನು ಪಡೆದುಕೊಂಡಿದೆ. ಇದನ್ನು ಗಮನಿಸಿದರೆ ಯಶ್ ಅವರ ಸಿನಿಮಾದ ಮೇಲಿರುವ ಕ್ರೇಜ್ ಭಾರತೀಯ ಚಿತ್ರರಂಗದಲ್ಲಿ ಎಷ್ಟು ಅಗಾಧವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಮತ್ತೊಂದೆಡೆ ಬಹುನಿರೀಕ್ಷಿತ ಸೀಕ್ವೆಲ್ ಚಿತ್ರಗಳಾದ ಆವಾರಾಪನ್ 2 ಶೇಕಡಾ 9.4 ಹಾಗೂ ಇಂದ್ರಜಾಲ್ ಶೇಕಡಾ 9.1 ರಷ್ಟು ವೋಟ್‌ಗಳೊಂದಿಗೆ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿವೆ. ಲೋಕೇಶ್ ಕನಕರಾಜ್ ನಟನೆಯ ಡಿಸಿ ಸಿನಿಮಾ ಶೇಕಡಾ 7.4 ರಷ್ಟು ಪಡೆದಿದ್ದರೆ, ಶ್ರದ್ಧಾ ಕಪೂರ್ ನಟನೆಯ ಈಥಾ, ಸೂರ್ಯ ಅಭಿನಯದ ವಿಶ್ವನಾಥ್ ಅಂಡ್ ಸನ್ಸ್ ಹಾಗೂ ಸೂಪರ್ ಹಿಟ್ ವೆಬ್ ಸರಣಿಯ ಮಿರ್ಜಾಪುರ್: ದಿ ಮೂವಿ ಕೂಡ ತಲಾ ಮೂರು ಶೇಕಡಾಗಿಂತಲೂ ಕಡಿಮೆ ಕ್ರೇಜ್‌ನೊಂದಿಗೆ ಈ ಪಟ್ಟಿಯಲ್ಲಿ ಕೊನೆಯ ಸಾಲಿನಲ್ಲಿವೆ.

ಚಿತ್ರದ ರಿಲೀಸ್ ಸಂದರ್ಭದಲ್ಲಿ ಟಾಕ್ಸಿಕ್ ಇಷ್ಟೊಂದು ದೊಡ್ಡ ಮಟ್ಟದ ಸದ್ದು ಮಾಡುತ್ತಿರುವುದು ಯಶ್ ಅವರ ಜಾಗತಿಕ ಮಾರುಕಟ್ಟೆಯ ತಾಕತ್ತನ್ನು ತೋರಿಸುತ್ತದೆ. ವಿರೋಧಿಗಳು ಹಬ್ಬಿಸುತ್ತಿರುವ ಯಾವುದೇ ನೆಗೆಟಿವ್ ಕಮೆಂಟ್‌ಗಳು ಅಥವಾ ಸುಳ್ಳು ಸುದ್ದಿಗಳು ಚಿತ್ರದ ಪ್ರಚಾರಕ್ಕೆ ಯಾವುದೇ ಪ್ರಭಾವ ಬೀರುತ್ತಿಲ್ಲ. ಗೀತು ಮೋಹನ್‌ದಾಸ್ ನಿರ್ದೇಶನದ ಈ ಆ್ಯಕ್ಷನ್ ಎಂಟರ್‌ಟೈನರ್ ಚಿತ್ರದ ಮೂಲಕ ರಾಕಿ ಭಾಯ್ ಭಾರತೀಯ ಸಿನಿಮಾ ಮಾರುಕಟ್ಟೆಯಲ್ಲಿ ಮತ್ತೊಂದು ಬಿರುಗಾಳಿ ಎಬ್ಬಿಸಲು ಸಂಪೂರ್ಣವಾಗಿ ಸಜ್ಜಾಗಿದ್ದಾರೆ.

## ಪ್ರಮುಖ ಅಂಶಗಳು

- ಐಎಂಡಿಬಿ ಪಟ್ಟಿಯಲ್ಲಿ ಯಶ್ ಸಾಮ್ರಾಜ್ಯ
- ಭಾರತೀಯ ಚಿತ್ರರಂಗದ ಅತಿ ನಿರೀಕ್ಷಿತ ಸಿನಿಮಾ ಆದ ಟಾಕ್ಸಿಕ್
- ಶೇಕಡಾ 47 ರಷ್ಟು ಮತಗಳೊಂದಿಗೆ ಅಗ್ರಸ್ಥಾನ

# ಎಲ್ಲಾ ಚಿತ್ರರಂಗದ ಸಕ್ಸಸ್ ರೇಟ್ 2-3 ಪರ್ಸೆಂಟ್ ಅಷ್ಟೇ.. ಸಿನಿಮಾ ಮಂದಿ ಎಡವುತ್ತಿರೋದು ಎಲ್ಲಿ?



2026 ಸಿನಿಮಾ ಮಂದಿಗೆ ಕರಾಳ ವರ್ಷ. ಅದರಲ್ಲೂ ಕನ್ನಡ ಚಿತ್ರರಂಗದ ಪರಿಸ್ಥಿತಿಯಂತೂ ಶೋಚನೀಯ. ಹಾಗಂತ ತೆಲುಗು, ತಮಿಳು ಚಿತ್ರರಂಗವೇನು ಇದರಿಂದ ಹೊರತಾಗಿ ಇಲ್ಲ. ಆದರೆ, ಕನ್ನಡ ಚಿತ್ರರಂಗದ ಪರಿಸ್ಥಿತಿ ಮಾತ್ರ ತೀರಾ ಕೆಟ್ಟದಾಗಿದೆ. ಇದಕ್ಕೆ ಕಾರಣ ಹುಡುಕಿ ಸಮಸ್ಯೆಯಿಂದ ಹೊರ ಬರುವ ಪ್ರಯತ್ನ ನಡೆಯುತ್ತಿದೆ. ದಕ್ಷಿಣ ಭಾರತೀಯ ಚಿತ್ರರಂಗದಲ್ಲಿ ನೂರಾರು ಸಿನಿಮಾಗಳು ರಿಲೀಸ್ ಆಗುತ್ತವೆ. ಅವುಗಳ ಸಕ್ಸಸ್ ರೇಟ್ 2 ರಿಂದ 3 ಪರ್ಸೆಂಟ್ ಅಂದರೆ ಸಮಸ್ಯೆ ತೀವ್ರ ಎಷ್ಟಿರಬೇಕು?

ಹೌದು, ಕನ್ನಡ ಚಿತ್ರರಂಗ ಅಷ್ಟೇ ಅಲ್ಲ. ಭಾರತದ ಎಲ್ಲಾ ಚಿತ್ರರಂಗಗಳ ಸಕ್ಸಸ್ ರೇಟ್ ಕಮ್ಮಿಯಿದೆ. ವರ್ಷಕ್ಕೆ ನಿರ್ಮಾಣ ಆಗುವ ಸಿನಿಮಾಗಳ ಸಂಖ್ಯೆ 100 ರಿಂದ 200. ಇವುಗಳಲ್ಲಿ ಗೆಲ್ಲೋದು 2 ರಿಂದ 5 ಸಿನಿಮಾಗಳು ಮಾತ್ರ. ಹೀಗಾಗಿ ಈ ಸಕ್ಸಸ್ ರೇಟ್ ಅನ್ನೇ ಇಟ್ಟುಕೊಂಡು ಸಿನಿಮಾ ಮಾಡುವ ಧೈರ್ಯ ಮಾಡುತ್ತಾರೆ. ಈ ಬಗ್ಗೆ ಇತ್ತೀಚೆಗೆ ಚಿತ್ರರಂಗದಲ್ಲಿ ಗಂಭೀರವಾದ ಚರ್ಚೆ ಕೂಡ ಆಗಿದೆ.

ಈ ವರ್ಷ ಕನ್ನಡ ಚಿತ್ರರಂಗದಲ್ಲಿ ಹಿಟ್ ಲಿಸ್ಟ್ ಸೇರಿದ್ದು ಒಂದೇ ಸಿನಿಮಾ. ಅದುವೇ ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿ, ನಿರ್ಮಿಸಿದ ಸಿನಿಮಾ ಲವ್ ಮಾಕ್ಟೇಲ್ 3. ಇದೂವರೆಗೂ ಕನ್ನಡ ಚಿತ್ರರಂಗದಲ್ಲಿ ಗೆಲುವು ಕಂಡಿದ್ದು ಒಂದೇ ಒಂದು ಸಿನಿಮಾ. ಇದಕ್ಕೆ ಇತ್ತೀಚೆಗೆ ಕನ್ನಡದ ಹಿರಿಯ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಕಾರಣಗಳನ್ನು ಬಿಚ್ಚಿದ್ದರು. ಅದೇನು ಅಂತ ನೋಡುವುದಾರೇ,

**ಸಿನಿಮಾಗಳು ಸೋಲುತ್ತಿರೋದ್ಯಾಕೆ?**

ಸಿನಿಮಾಗಳು ಸೋಲುತ್ತಿರುವುದಕ್ಕೆ ಕಾರಣಗಳನ್ನು ಕಂಡುಕೊಳ್ಳುವ ಅನಿವಾರ್ಯತೆ ಎದುರಾಗಿದೆ. ಅದರಲ್ಲೂ ಕನ್ನಡ ಚಿತ್ರರಂಗ ಇಂತಹದ್ದೊಂದು ಪರಾಮರ್ಶೆ ಮಾಡಿಕೊಳ್ಳಲೇಬೇಕಿದೆ. ಚಿತ್ರಮಂದಿರಕ್ಕೆ ಜನರನ್ನು ಕರೆದುಕೊಂಡು ಬರುವುದಕ್ಕೆ ಸೋಲುತ್ತಿರೋದು ಯಾಕೆ? ಹೊಸಬರ ಸಿನಿಮಾಗಳು ಥಿಯೇಟರ್‌ನಲ್ಲಿ ಒಂದು ವಾರವೂ ಕಚ್ಚಿಕೊಳ್ಳುತ್ತಿಲ್ಲ ಯಾಕೆ? ಇಂತಹ ಸಾವಿರಾರು ಪ್ರಶ್ನೆಗಳು ಇವೆ. ಅದಕ್ಕೆ ಹಿರಿಯ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಇತ್ತೀಚೆಗೆ ನಡೆದ ಸೈನಿಕ 2 ಸಿನಿಮಾದ ಮುಹೂರ್ತದ ವೇಳೆ ರಿವೀಲ್ ಮಾಡಿದ್ದರು.

**ಓಟಿಟಿ ಡಾಮಿನೇಟ್ ಮಾಡುತ್ತಿದೆಯೇ?**

ರಾಕ್‌ಲೈನ್ ವೆಂಕಟೇಶ್ ಪ್ರಕಾರ ಸಿನಿಮಾವನ್ನು ಓಟಿಟಿ ವೇದಿಕೆಗಳು ಡಾಮಿನೇಟ್ ಮಾಡುತ್ತಿವೆ. ನಮ್ಮ ಚಿತ್ರರಂಗದಲ್ಲಿ ನೂರಾರು ಕೋಟಿ ಖರ್ಚು ಮಾಡಿ ಸಿನಿಮಾ ಮಾಡುವ ನಿರ್ಮಾಪಕರು ಇದ್ದೀವಿ. ಏನಕ್ಕೆ ಸಿನಿಮಾ ಮಾಡುತ್ತಿಲ್ಲ ಅಂದರೆ, ಇವತ್ತು ಓಟಿಟಿ ಡಾಮಿನೇಟ್ ಮಾಡುತ್ತೆ. ಎರಡನೇಯದ್ದು ಬಾಕ್ಸಾಫೀಸ್. ನಮ್ಮ ಸಿನಿಮಾಗಳನ್ನು ಬಿಡುಗಡೆ ಮಾಡಲು ಥಿಯೇಟರ್‌ಗಳನ್ನು ಪಡೆಯುವುದಕ್ಕೆ 50-100 ಸಿನಿಮಾ ಮಾಡಿರುವವರೇ ಒದ್ದಾಡುತ್ತಿದ್ದೇವೆ. ಇಂತಹ ಚಾಲೆಂಜ್‌ಗಳ ಮಧ್ಯೆ ಕನ್ನಡ ಸಿನಿಮಾ ಮಾಡುತ್ತಿರುವ ನಿರ್ಮಾಪಕರಿಗೆ ಧನ್ಯವಾದಗಳನ್ನು ಹೇಳಲೇಬೇಕು ಎನ್ನುತ್ತಾರೆ ಹಿರಿಯ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್.

## ಸೋಲುತ್ತಿರೋದು ಎಲ್ಲಿ?

ಇವತ್ತು ಸಿನಿಮಾ ಮಾಡುವುದು ಅಷ್ಟು ಸುಲಭ ಅಲ್ಲ. ಎರಡು-ಮೂರು ವರ್ಷ ಆಗುತ್ತೆ. ನಾನು ಒಂದು ಕಥೆ ಏಳು ವರ್ಷದಿಂದ ಮಾಡುತ್ತಿದ್ದೇನೆ. ಇಂದೂ ಕೂಡ ಸರಿಯಾಗಿ ರೆಡಿಯಾಗಿಲ್ಲ. ಒಂದೆರಡು ತಿಂಗಳಲ್ಲಿ ಅನೌನ್ಸ್ ಮಾಡುತ್ತೇನೆ. ಅದೂ ಕೂಡ ಪ್ಯಾನ್ ಇಂಡಿಯಾ ಸಿನಿಮಾನೇ? ನಿಮಗೆ ಗೊತ್ತು ಸಕ್ಸಸ್ ರೇಟ್ 2 ರಿಂದ 3 ಪರ್ಸೆಂಟ್ ಇದೆ. ಆದಷ್ಟು ಬೇಗ ಎಲ್ಲಾ ಸರಿ ಹೋಗುತ್ತೆ.

**- ನಟ, ನಿರ್ಮಾಪಕ,** ರಾಕ್‌ಲೈನ್ ವೆಂಕಟೇಶ್.

## ಎಲ್ಲಿ ಎಡವಟ್ಟಾಗುತ್ತಿದೆ?

ಸಿನಿಮಾ ನಿರ್ಮಾಣ ಅನ್ನೋದು ಅಷ್ಟು ಸುಲಭ ಅಲ್ಲ. ನೂರಾರು ಕೋಟಿ ಸುರಿದು ಸಿನಿಮಾ ಮಾಡಿದರೆ ಮಾತ್ರ ಗೆಲ್ಲೋದು ಅನ್ನೋ ಮನಸ್ಥಿತಿಯಿದೆ. ಅದು ಮೊದಲ ಹೋಗಬೇಕು. ಜನರು ಪ್ಯಾನ್ ಇಂಡಿಯಾ ಸಿನಿಮಾ ಬಿಟ್ಟು ಬೇರೆ ಸಿನಿಮಾಗಳನ್ನು ನೋಡುತ್ತಿಲ್ಲ ಅನ್ನೋದು ನಿರ್ಮಾಪಕರ ವಾದ. ಇನ್ನು ಬ್ಯುಸಿನೆಸ್ ಅಂತ ಬಂದಾಗಲೂ ಪ್ಯಾನ್ ಇಂಡಿಯಾ ಸಿನಿಮಾ ಆದರೆ ಮಾತ್ರ ಬ್ಯುಸಿನೆಸ್ ಆಗುತ್ತೆ. ಇಲ್ಲದೇ ಸ್ಯಾಟಲೈಟ್, ಓಟಿಟಿ ಬ್ಯುಸಿನೆಸ್ ಆಗುವುದಿಲ್ಲ ಅನ್ನೋದು ನಿರ್ಮಾಪಕರ ಆರೋಪ.

ಇವತ್ತು ಕಾಲ ಬದಲಾಗಿದೆ. ಇವತ್ತು ವ್ಯಾಪಾರಕ್ಕೆ ಹೋದರೆ, ಪ್ಯಾನ್ ಇಂಡಿಯಾ ಸಿನಿಮಾನಾ? ಇಲ್ಲಾ ರಿಜನಲ್ ಸಿನಿಮಾನಾ ಅಂತಾರೆ. ಅಲ್ಲಿ ಆ ಸಿನಿಮಾದ ಯೋಗ್ಯತೆ ಏನು ಅಂತ ಚರ್ಚೆ ಮಾಡುತ್ತಾರೆ. ಹೀಗಾಗಿ ಇವತ್ತು ಸಿನಿಮಾ ಮಾಡುವಾಗ ಪ್ಯಾನ್ ಇಂಡಿಯಾನೇ ಮಾಡಬೇಕು. ಇವತ್ತು ಶಿವಣ್ಣ ತೆಲುಗು, ತಮಿಳು ಮಾಡ್ತಿದ್ದಾರೆ. ಉಪೇಂದ್ರ ಮಾಡುತ್ತಿದ್ದಾರೆ. ಅಲ್ಲಿನವರು ಇಲ್ಲಿಗೆ ಬರುತ್ತಿದ್ದಾರೆ.

**- ನಟ, ನಿರ್ಮಾಪಕ,** ರಾಕ್‌ಲೈನ್ ವೆಂಕಟೇಶ್.

# ನಾನು ಬಾರ್ಡರ್ ದಾಟಬೇಕು.. ಅವರನ್ನು ಮೆಚ್ಚಿಸ್ಬೇಕು ಅನ್ನೋದಕ್ಕೆ ಸಿನಿಮಾ ಮಾಡಲ್ಲ; ಕುಕ್ಕಿದ್ದು ಯಾರಿಗಪ್ಪ?

ನದಿಯಲ್ಲಿ ಈಜುವುದಕ್ಕೆ ಹೋದ್ವಿ. ಆದರೆ, ಅದರು ಸಮುದ್ರ ಅಂತ ಗೊತ್ತಾಯ್ತು. ಸ್ವಲ್ಪ ಕಷ್ಟ. ಅದಕ್ಕೆ ಬೇಕಾಗಿರೋ ತಯಾರಿಗಳು, ಅದಕ್ಕೆ ಬೇಕಾಗಿರುವಂತಹ ಶ್ರಮ, ಎಲ್ಲಾ ರೀತಿಯಿಂದಲೂ ಅದಕ್ಕೆ ಬೇಕಾಗಿರೋದನ್ನು ಕೊಡುವುದಕ್ಕೆ ನಾವು ಕೆಲವು ತ್ಯಾಗಗಳನ್ನು ಮಾಡಲೇಬೇಕಿತ್ತು. ಅದನ್ನು ನಾನು ಮಾಡಿದ್ದೀನಿ. ನಾವು ಯಾವುದೇ ಪ್ರಡ್ಯೂಸರ್‌ಗೂ ಲೇಟ್ ಆಗಿ ಸಿನಿಮಾ ಮಾಡಿ ಅಂತ ಹೇಳಲ್ಲ. ನಾವು ರೆಡಿ ಆಗ್ತೀವಿ, ಬೇಗ ಬೇಗ ಸಿನಿಮಾ ಮಾಡಬೇಕು. ಆದರೆ, ನಿರ್ದೇಶಕರಿಗೆ ಅವರದ್ದೇ ಆದ ಒಂದು ತಲೆ ಅನ್ನೋದು ಇರುತ್ತೆ. ಕೆಲವು ವೇಳೆ ತಡವಾಗುತ್ತೆ. ಆದರೆ, ಅದ್ಯಾವುದೂ ಒಳ್ಳೆಯದಲ್ಲ. ಬೇಗ ಬೇಗ ಕೆಲಸ ಮಾಡಬೇಕು. ಬೇಗ ಬೇಗ ಕಥೆ ಮಾಡಿಕೊಳ್ಳಬೇಕು. ಬೇಗ ಬೇಗ ಶೂಟಿಂಗ್ ಮಾಡಬೇಕು. ಹೀಗಾಗಿ ಆದಷ್ಟು ಬೇಗ ಈ ಸಿನಿಮಾವನ್ನು ಮುಗಿಸಿಕೊಡುತ್ತೇನೆ.

**- ನಟ,** ಶ್ರೀಮುರಳಿ.

ಸ್ಯಾಂಡಲ್‌ವುಡ್ ಭರವಸೆ ಇಟ್ಟು ಕಾಯ್ತಿರೋ ಸ್ಟಾರ್ ಹೀರೋಗಳಲ್ಲಿ ರೋರಿಂಗ್ ಸ್ಟಾರ್ ಶ್ರೀ ಮುರಳಿ ಕೂಡ ಒಬ್ಬರು. ಕನ್ನಡದಲ್ಲಿ ಇರುವ ಕೆಲವೇ ಕೆಲವು ಸ್ಟಾರ್ ನಟರಲ್ಲಿ ಶ್ರೀ ಮುರಳಿ ಕೂಡ ಸೇರಿಕೊಳ್ಳುತ್ತಿದ್ದಾರೆ. ಸದ್ಯ ಕನ್ನಡ ಚಿತ್ರರಂಗದ ಪರಿಸ್ಥಿತಿ ಕೆಟ್ಟಾಗಿ ಇದ್ದು, ಹೀರೋ ವರ್ಷಕ್ಕೆ ಕನಿಷ್ಟ ಅಂದರೂ ಒಂದೊಂದು ಸಿನಿಮಾ ಮಾಡಬೇಕು ಅಂತ ಕೂಗು ಕೇಳಿ ಬರುತ್ತಿದೆ. ಆದರೆ, ಶ್ರೀಮುರಳಿ ಈ ಥಿಯೇರಿಗೆ ವಿರುದ್ಧವಾಗಿ ಇದ್ದಂತೆ ಇದೆ.



ರೋರಿಂಗ್ ಸ್ಟಾರ್ ಶ್ರೀಮುರಳಿ ನಟಿಸಿದ ಬಘೀರ ಬಳಿಕ ಸಿನಿಮಾ ಮಾಡೋ ಸ್ಪೀಡ್ ಅನ್ನು ಕಡಿಮೆ ಮಾಡಿದ್ದಾರೆ. ಕಥೆಗಳನ್ನು ಅಳೆದು-ತೂಗಿ ಆಯ್ಕೆ ಮಾಡುತ್ತಿದ್ದಾರೆ. ಹೀಗಾಗಿ ಈಗಾಗಲೇ ಒಪ್ಪಿಕೊಂಡಿರುವ ಸಿನಿಮಾಗಳು ಕೂಡ ತಡವಾಗುತ್ತಿವೆ. ಅದರಲ್ಲಿ ಪರಾಕ್ ಕೂಡ ಒಂದು. ಬಘೀರ ಶೂಟಿಂಗ್ ವೇಳೆನೇ ಪರಾಕ್ ಅನೌನ್ಸ್ ಆಗಿತ್ತು. ಆದರೆ ಇನ್ನೂ ಸಿನಿಮಾ ಮುಗಿದಿಲ್ಲ. ಈಗ ಟೀಸರ್ ಬಿಟ್ಟು ಸಿನಿಮಾ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಹೀಗಾಗಿ ಪರಾಕ್ ಟೀಸರ್ ಲಾಂಚ್ ವೇಳೆ ಪತ್ರಕರ್ತರು ಶ್ರೀಮುರಳಿಗೆ ಪ್ರಶ್ನೆಗಳ ಸರಿಮಳೆ ಸುರಿಸಿದ್ದಾರೆ. ಒಂದೊಂದು ಸಿನಿಮಾವನ್ನು ಸಮಯ ನಿಗದಿ ಪಡಿಸಿಕೊಂಡು ಮುಗಿಸಬೇಕು ಎಂದು ಆಗ್ರಹಿಸಿದ್ದಾರೆ. ಅದಕ್ಕೆ ಶ್ರೀಮುರಳಿ ಕೊಟ್ಟ ಉತ್ತರ ಬೇರೆ ಯಾರಿಗೋ ಟಾಂಗ್ ಕೊಟ್ಟಂತೆ ಅನಿಸಿದೆ. ನಾನು ಬಾರ್ಡರ್ ದಾಟಬೇಕು.. ಅವರನ್ನು ಮೆಚ್ಚಿಸ್ಬೇಕು ಅನ್ನೋದಕ್ಕೆ ಸಿನಿಮಾ ಮಾಡಲ್ಲ ಎಂದಿದ್ದು, ಆತುರದಲ್ಲಿ ಸಿನಿಮಾ ಮಾಡುವುದು ಬೇರೆ, ಬುದ್ಧಿವಂತಿಕೆಯಿಂದ ಸಿನಿಮಾ ಮಾಡುವುದು ಬೇರೆ ಅನ್ನೋ ಮಾತುಗಳು ಚರ್ಚೆಯಾಗುತ್ತಿವೆ.

ಪರಾಕ್ ಅನೌನ್ಸ್ ಆಗಿ ವರ್ಷಗಳೇ ಆಗಿದ್ದರೂ ಸಿನಿಮಾ ಇನ್ನೂ ಮುಗಿದಿಲ್ಲ. ಹೊಗಲಿ, ಶೂಟಿಂಗ್ ಮುಗಿಸಿ, ಈ ವರ್ಷ ಪರಾಕ್ ರಿಲೀಸ್ ಆಗುತ್ತಾ ಅಂತ ನೋಡಿದರೆ, ಅದೂ ಆಗುವುದಿಲ್ಲ. ಈ ಕಾರಣಕ್ಕೆ ಸಿನಿಮಾ ಯಾಕೆ ತಡವಾಯ್ತು? ಅನ್ನೋ ಪ್ರಶ್ನೆ ಮುಂದಿಟ್ಟಿದ್ದರು. ಅದಕ್ಕೆ ಶ್ರೀಮುರಳಿ ನಿಖರವಾದ ಕಾರಣವನ್ನು ಕೊಟ್ಟಿದ್ದಾರೆ.

ಇನ್ನು ಪರಾಕ್ ಕೂಡ ಹಲವು ಭಾಷೆಗಳಲ್ಲಿ ರಿಲೀಸ್ ಆಗುತ್ತಿದೆ. ಆದರೆ, ಶ್ರೀಮುರಳಿ ಮಾತ್ರ ನನ್ನ ತಾಯ್ನಾಡಿಗೆ ಮೊದಲ ಆದ್ಯತೆ ಎಂದು ಹೇಳಿದ್ದಾರೆ. ಅದಲ್ಲದೆ, ನಾನು ಬಾರ್ಡರ್ ದಾಟಬೇಕು. ಅವರನ್ನು ಮೆಚ್ಚಿಸಿಕೊಳ್ಳಬೇಕು ಅನ್ನೋದಕ್ಕೆ ನಾನು ಸಿನಿಮಾ ಮಾಡುವುದಿಲ್ಲ ಎಂದು ಹೇಳಿದ್ದು, ಕನ್ನಡ ಪ್ಯಾನ್ ಇಂಡಿಯಾ ಸ್ಟಾರ್‌ಗಳಿಗೆ ಟಾಂಗ್ ಕೊಟ್ಟಿದ್ದಾ? ಅನ್ನೋ ಅನುಮಾನವೂ ಮೂಡಿದೆ.

ಇಡೀ ವಿಶ್ವದಲ್ಲಿ ಸಿನಿಮಾ ಅನ್ನೋದಕ್ಕೆ ಇರೋದು ಒಂದೇ ಭಾಷೆ. ನಿಮಗೆ ಗೊತ್ತಿರೋದು ಸಿನಿಮಾ. ನನಗೆ ಗೊತ್ತಿರೋದು ಸಿನಿಮಾ. ನಾನು ಬಾರ್ಡರ್ ದಾಟಬೇಕು. ಅವರನ್ನು ಮೆಚ್ಚಿಸಿಕೊಳ್ಳಬೇಕು ಅನ್ನೋದಕ್ಕೆ ನಾನು ಸಿನಿಮಾ ಮಾಡುವುದಿಲ್ಲ. ಮೊದಲು ನನ್ನ ತಾಯ್ನಾಡು, ನನ್ನ ಭಾಷೆ, ನನ್ನ ನೆಲ, ನಾನು ಬೆಳೆದ ಜಾಗ, ಇದು ನನ್ನ ಮೊದಲ ಆದ್ಯತೆ. ನಮ್ಮ ರಾಜ್ಯದಲ್ಲಿಯೇ ನಾನು ಸಿನಿಮಾ ಮಾಡುತ್ತಿದ್ದೇನೆ. ಕೇವಲ ಒಳ್ಳೆಯ ಸಿನಿಮಾ ಮಾಡುವುದಷ್ಟೇ ನಮ್ಮ ಆಲೋಚನೆ. ಕೊಡುಗೆ ಅನ್ನೋದು ಎಲ್ಲಾ ರೆಡಿ ಆದ್ಮೇಲೆ. ಯಾರೆಲ್ಲ ಇದನ್ನು ನೋಡಿರುತ್ತಾರೋ? ಅವರಿಗೆ ಇಷ್ಟವಾಗಿ ಬೇಕಾದರೆ ಇದಕ್ಕೆ ಪ್ರತಿಕ್ರಿಯೆ ನೀಡುತ್ತಾರೆ. ನಾವು ಯಾರ ಹಿಂದೇನೂ ಹೋಗಲ್ಲ. ಮೊದಲು ನಾನು ಕೆಲಸ ಮಾಡುತ್ತೇನೆ - ನಟ, ಶ್ರೀಮುರಳಿ

ಇನ್ನು ಪರಾಕ್ ಬಗ್ಗೆ ಶ್ರೀ ಮುರಳಿ ಕಾನ್ಫಿಡೆಂಟ್ ಆಗಿರೋ ಹಾಗೆ ಕಾಣಿಸುತ್ತಿದೆ. ಅಲ್ಲದೇ ವರ್ಷಕ್ಕೊಂದು ಸಿನಿಮಾ ಮಾಡುವ ಬಗ್ಗೆ ಸಹಮತ ಇದ್ದಂತೆ ಕಾಣುತ್ತಿಲ್ಲ. ಯಾಕಂದ್ರೆ, ಆತುರದಲ್ಲಿ ಸಿನಿಮಾ ಮಾಡುವುದು ಬೇರೆ, ಬುದ್ಧಿವಂತಿಕೆಯಿಂದ ಸಿನಿಮಾ ಮಾಡುವುದು ಬೇರೆ ಎಂದು ಹೇಳಿರೋದು ಅಂತಹದ್ದೊಂದು ಸುಳಿವು ನೀಡಿದೆ.

# ನಟಿ ಉಮಾ ಶಂಕರಿಗೆ ಸ್ತನ ಕ್ಯಾನ್ಸರ್

ತಮ್ಮ ಅನಾರೋಗ್ಯದ ಕುರಿತು ಮಾತನಾಡಿದ್ದ ನಟಿ ಉಮಾ ಶಂಕರಿ, ಕ್ಯಾನ್ಸರ್ ರೋಗನಿರ್ಣಯದ ಆರಂಭಿಕ ದಿನಗಳಲ್ಲಿ ತಮಗಾದ ಭಾವನಾತ್ಮಕ ನೋವಿನ ಬಗ್ಗೆ ಹಂಚಿಕೊಂಡಿದ್ದರು. ಇದು ನನಗೆ ಹೇಗೆ ಸಂಭವಿಸಿತು? ಮತ್ತು ನನಗೆ ಈ ಕಾಯಿಲೆ ಏಕೆ ಬಂತು ಮುಂತಾದ ಪ್ರಶ್ನೆಗಳಿಂದ ತಮ್ಮ ಮನಸ್ಸು ಸದಾ ತುಂಬಿರುತ್ತಿತ್ತು ಎಂದು ಹೇಳಿದ್ದಾರೆ. ಆದಾಗ್ಯೂ, ತಮಗೆ ಬಂದಿರುವ ರೋಗನಿರ್ಣಯವನ್ನು ಮನಸ್ಸು ಪೂರ್ವಕವಾಗಿ ಸ್ವೀಕರಿಸುವುದು ಈ ಇಡೀ ಪ್ರಯಾಣದ ಅತ್ಯಂತ ಕಷ್ಟಕರವಾದ ಭಾಗಗಳಲ್ಲಿ ಒಂದಾಗಿತ್ತು ಎಂದು ಹೇಳಿದ್ದಾರೆ



# ರಿಚರ್ಡ್ ಆಂಟನಿ ಬಗ್ಗೆ ಬಾಂಬ್ ಸಿಡಿಸಿದ ಅಜನೀಶ್ ಲೋಕನಾಥ್; ರಕ್ಷಿತ್ ಶೆಟ್ಟಿ ಎಂಟ್ರಿಗೆ ಮುಹೂರ್ತ ಫಿಕ್ಸ್ ಆಯ್ತಾ?

ಸ್ಯಾಂಡಲ್‌ವುಡ್‌ನಲ್ಲಿ ಮೋಸ್ಟ್ ಎಕ್ಸ್‌ಪೆಕ್ಟೆಡ್ ಸಿನಿಮಾಗಳಲ್ಲಿ ರಿಚರ್ಡ್ ಆಂಟನಿ ಕೂಡ ಒಂದು. ಇದೊಂದು ಸಿನಿಮಾಗಾಗಿ ಕನ್ನಡಿಗರು ಕಾದೂ ಕಾದು ಸುಸ್ತಾಗಿದ್ದು ಬಿಟ್ಟರೆ, ರಕ್ಷಿತ್ ಶೆಟ್ಟಿಯಿಂದ ಯಾವುದೇ ಅಪ್‌ಡೇಟ್ ಇಲ್ಲ. ಕೆಲವು ವರ್ಷಗಳಿಂದ ಈ ಸಿನಿಮಾಗಾಗಿ ರಕ್ಷಿತ್ ಶೆಟ್ಟಿ ತೆರೆಮರೆಯಲ್ಲಿ ಕೆಲಸ ಮಾಡುತ್ತಲೇ ಇದ್ದಾರೆ. ಆದರೆ, ಅದ್ಯಾಕೋ ಇನ್ನೂ ಮುಹೂರ್ತವೇ ಕೂಡ ಬಂದಿಲ್ಲ. ಇತ್ತ ಸಿಂಪಲ್ ಸ್ಟಾರ್ ಸುಳಿವು ಕೂಡ ಇಲ್ಲ.

ಇದು ರಕ್ಷಿತ್ ಶೆಟ್ಟಿಯ ಅತ್ಯಂತ ಮಹತ್ವಾಕಾಂಕ್ಷೆಯ ಪ್ರಾಜೆಕ್ಟ್. ಹೀಗಾಗಿ ರಿಚರ್ಡ್ ಆಂಟನಿಗೆ ಸಾಕಷ್ಟು ಸಮಯ ತೆಗೆದುಕೊಂಡಿದ್ದಾರೆ. ಕೆಲವು ವರ್ಷಗಳಿಂದ ಈ ಸಿನಿಮಾ ಸ್ಕ್ರಿಪ್ಟ್ ಮಾಡುತ್ತಾ ಕೂತಿದ್ದಾರೆ. ಆದರೆ, ಇನ್ನೂ ಎಷ್ಟು ದಿನ ಅನ್ನೋದು ಸಿನಿಪ್ರೇಮಿಗಳ ಪ್ರಶ್ನೆ ಆಗಿತ್ತು. ಅದಕ್ಕೆ ಸಿಂಪಲ್ ಸ್ಟಾರ್ ಕಡೆಯಿಂದ ಉತ್ತರ ಸಿಕ್ಕಿರಲಿಲ್ಲ. ಆದ್ರೀಗ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಬಾಂಬ್ ಅನ್ನೇ ಸಿಡಿಸಿದ್ದಾರೆ.

ಹೌದು, ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡುತ್ತಿರುವ ಈ ಸಿನಿಮಾ ಸ್ಯಾಂಡಲ್‌ವುಡ್‌ನ ಮೋಸ್ಟ್ ಎಕ್ಸ್‌ಪೆಕ್ಟೆಡ್ ಸಿನಿಮಾ. ಅಂದ್ಮೇಲೆ ಇದು ಕೂಡ ಪ್ಯಾನ್ ಇಂಡಿಯಾ ರಿಲೀಸ್ ಆಗೋದ್ರಲ್ಲಿ ಡೌಟೇ ಇಲ್ಲ. ಹೀಗಾಗಿ ಅಗತ್ಯಕ್ಕಿಂತ ಹೆಚ್ಚು ಸಮಯ ತೆಗೆದುಕೊಂಡಿದ್ದಾರೆ ಅನ್ನೋದು ಸುದ್ದಿ. ಆದ್ರೆ, ಇಷ್ಟು ದಿನ ಕಾದಿದ್ದಕ್ಕೆ ಉತ್ತರ ಸಿಗೋ ಸಮಯ ಬಂದು ಬಿಟ್ಟಿದೆ ಅನಿಸುತ್ತಿದೆ. ಕಾರ್ಯಕ್ರಮವೊಂದರಲ್ಲಿ ಅಜನೀಶ್ ಲೋಕನಾಥ್ ರಿಚರ್ಡ್ ಆಂಟನಿ ಬಗ್ಗೆ ಅಪ್‌ಡೇಟ್ ಕೊಟ್ಟಿರೋದು ಸಿಕ್ಕಾಪಟ್ಟೆ ಸುದ್ದಿಯಾಗುತ್ತಿದೆ. ಅದರ ಡಿಟೈಲ್ಸ್ ಇಲ್ಲಿದೆ.

**ಏನಿದೆ ಅಪ್‌ಡೇಟ್?**



ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ಬಹಳ ದಿನಗಳ ನಂತ್ರ ಮತ್ತೆ ನಿರ್ದೇಶನಕ್ಕೆ ಮರಳುತ್ತಿದ್ದಾರೆ. ಇನ್ನು ಸಪ್ತ ಸಾಗರದಾಚೆ ಎಲ್ಲೋ ಅಂತಹ ಭಾವನಾತ್ಮಕ ಸಿನಿಮಾದಲ್ಲಿ ಅಳಿಸಿದ ಬಳಿಕ ಕಾಣೆಯಾದವರು ಇದೂ ವರೆಗೂ ತೆರೆ ಮೇಲೆ ಕಂಡಿಲ್ಲ. ಹೀಗಾಗಿ ರಿಚರ್ಡ್ ಆಂಟನಿ ಸೆಟ್ಟೇರುತ್ತೋ ಇಲ್ವೋ ಅಂತ ಸಿನಿಪ್ರಿಯರು ಆತಂಕಕ್ಕೆ ಒಳಗಾಗಿದ್ದರು. ಆದ್ರೀಗ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಸಹಿ ಸುದ್ದಿಯೊಂದನ್ನು ನೀಡಿದ್ದಾರೆ. ಶೀಘ್ರದಲ್ಲಿಯೇ ಸಿನಿಮಾ ಸೆಟ್ಟೇರುತ್ತೆ ಎಂಬ ಸುಳಿವು ನೀಡಿದ್ದಾರೆ.

**ರಕ್ಷಿತ್ ಶೆಟ್ಟಿ ರೆಡಿ**

ಅಜನೀಶ್ ಲೋಕನಾಥ್ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದಾಗ ರಕ್ಷಿತ್ ಶೆಟ್ಟಿ ಸಿನಿಮಾ ಬಗ್ಗೆ ಕೆಲವು ಪ್ರಮುಖ ಅಂಶಗಳನ್ನು ಹಂಚಿಕೊಂಡಿದ್ದಾರೆ. ಸದ್ಯಕ್ಕಿದು ಸಮಾಧಾನ ತಂದಿದೆ. ರಿಚರ್ಡ್ ಆಂಟನಿಗೆ ನಾನು ರೆಡಿ ಆಗಿದ್ದೇನೆ. ಇತ್ತ ರಕ್ಷಿತ್ ಶೆಟ್ಟಿ ಕೂಡ ರೆಡಿಯಾಗಿದ್ದಾರೆ. ಇಡೀ ಚಿತ್ರತಂಡ ಕೂಡ ಶೂಟಿಂಗ್ ಹೋಗುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ. ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದ ದಿನಗಳು ಸಮೀಪದಲ್ಲಿದೆ ಎಂದು ಅಜನೀಶ್ ಲೋಕನಾಥ್ ಹೇಳಿದ್ದಾರೆ.

**ರಿಚರ್ಡ್ ಆಂಟನಿ ಒಂದು ನ್ಯೂಕ್ಲಿಯರ್ ಬಾಂಬ್**

ಅಜನೀಶ್ ಲೋಕನಾಥ್ ರಿಚರ್ಡ್ ಆಂಟನಿ ಕಥೆ ಹಾಗೂ ಚಿತ್ರಕಥೆ ಬಗ್ಗೆ ಅಪಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ರಿಚರ್ಡ್ ಆ್ಯಂಟನಿ ಒಂದು ರೆಗ್ಯೂಲರ್ ಸಿನಿಮಾ ಆಗುವುದಿಲ್ಲ. ಅದು ಸ್ಯಾಂಡಲ್‌ವುಡ್‌ನಲ್ಲಿ ನ್ಯೂಕ್ಲಿಯರ್ ಬಾಂಬ್‌ನಂತೆ ಸ್ಫೋಟಗೊಳ್ಳಲಿದೆ. ರಕ್ಷಿತ್ ಶೆಟ್ಟಿ ವಿಭಿನ್ನವಾದ ಸ್ಕ್ರೀನ್ ಪ್ಲೇ ಮೂಲಕ ಭರ್ಜರಿ ಕಮ್‌ಬ್ಯಾಕ್ ಮಾಡಲಿದ್ದಾರೆಂದು ಅತೀ ವಿಶ್ವಾಸದಿಂದ ಅಜನೀಶ್ ಲೋಕನಾಥ್ ಹೇಳಿದ್ದಾರೆ.

**ಉಳಿದವರು ಕಂಡಂತೆ ಪ್ರೀಕ್ವೆಲ್**

ರಕ್ಷಿತ್ ಶೆಟ್ಟಿ ನಿರ್ದೇಶಿಸಿದ ಉಳಿದವರು ಕಂಡಂತೆ ಸಿನಿಮಾ ಥಿಯೇಟರ್‌ನಲ್ಲಿ ಸೋತರೂ ನಂತರ ಅದು ಕಲ್ಟ್ ಸಿನಿಮಾ ಲಿಸ್ಟ್ ಸೇರಿತು. ಇದು ಕನ್ನಡ ಚಿತ್ರರಂಗದ ಅತ್ಯುತ್ತಮ ಸಿನಿಮಾಗಳಲ್ಲಿ ಒಂದು. ಅದರ ಪ್ರೀಕ್ವೆಲ್ ಈ ರಿಚರ್ಡ್ ಆಂಟನಿ. ಈ ಸಿನಿಮಾವನ್ನು ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡುತ್ತಿದೆ. ಈಗಾಗಲೇ ಸಿನಿಮಾ ಅನೌನ್ಸ್ ಆಗಿದೆ. ಆದ್ಮೇಲೂ ಶೂಟಿಂಗ್ ಶುರುವಾಗೋಕೆ ಸಾಕಷ್ಟು ಸಮಯ ತೆಗೆದುಕೊಂಡಿದೆ. ಇನ್ನೊಂದು ಕಡೆ ರಕ್ಷಿತ್ ಶೆಟ್ಟಿ ಒಂದಲ್ಲ ಐದು ಸಿನಿಮಾಗಳಿಗೆ ಕಥೆ ರೆಡಿ ಮಾಡಿಕೊಂಡಿದ್ದು, ಇನ್ನು ಬ್ಯಾಕ್ ಟು ಬ್ಯಾಕ್ ಸಿನಿಮಾ ಮಾಡಲಿದ್ದಾರೆ.

CMYK CMYK CMYK CMYK

# ಬೆಳೆ ವಿಮೆ ಬಗ್ಗೆ ಅರಿವು ಮೂಡಿಸಲು ಸೂಚನೆ

## ಫಸಲ್ ಭೀಮಾ ವಿಮಾ ಯೋಜನೆ ಕುರಿತು ರೈತರಿಗೆ ತಿಳುವಳಿಕೆ ನೀಡಲು ಆಟೋ ಪ್ರಚಾರಕ್ಕೆ ಚಾಲನೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಬೆಳೆ ವಿಮೆಯ ಲಾಭ ಪಡೆಯುವಂತೆ ಗ್ರಾಮ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ಗುರುವಾರ ನಡೆದ ಬೆಳೆ ವಿಮೆ ಯೋಜನೆ ಕುರಿತ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳ ಸಭೆಯಲ್ಲಿ ಮಾತನಾಡಿದ ಅವರು, ಮುಂಗಾರು ಮಳೆ ಈ ಬಾರಿ ಕೈಕೊಟ್ಟಿರುವುದರಿಂದ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಬರಗಾಲ ಎದುರಾಗುವ ಸಾಧ್ಯತೆ ಇದೆ ಎಂದರು.

ಆಷಾಢದಲ್ಲೂ ಬೇಸಿಗೆಯ ವಾತಾವರಣ ನಿರ್ಮಾಣವಾಗಿದೆ. ಕಳೆದ ವರ್ಷ ಇಷ್ಟೊತ್ತಿಗೆ ಜಲಾಶಯಗಳು ಭರ್ತಿಯಾಗಿದ್ದವು. ಈಗ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದೆ. ಮುಸುಕಿನ ಜೋಳಕ್ಕೆ ಬಿಳಿಸುಳಿ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಯಾವುದೇ ಅರ್ಹ ರೈತರು ವಿಮೆಯಿಂದ ವಂಚಿತರಾಗದಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಬ್ಯಾಂಕ್, ಕೃಷಿ ಹಾಗು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ಗ್ರಾಮ ಮಟ್ಟದಲ್ಲಿ ರೈತರಿಗೆ ಬೆಳೆ ವಿಮೆಯ ಮಹತ್ವ, ನೋಂದಣಿ ವಿಧಾನ, ಕೊನೆಯ ದಿನಾಂಕ ಹಾಗು ಯೋಜನೆಯ ಪ್ರಯೋಜನಗಳ ಕುರಿತು ಮಾಹಿತಿ ನೀಡಬೇಕು. ಯೋಜನೆಯ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಿ ತಾಲ್ಲೂಕಿನಲ್ಲಿ ಶೇ.100 ರಷ್ಟು ಅರ್ಹ ರೈತರನ್ನು ಬೆಳೆ ವಿಮೆ ವ್ಯಾಪ್ತಿಗೆ ತರುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕೆಂದರು.

ಕಳೆದ ಸಾಲಿನ ಹಂಗಾಮಿನಲ್ಲಿ 22 ಸಾವಿರಕ್ಕೂ ಹೆಚ್ಚು ರೈತರು ಬೆಳೆ ವಿಮೆಗೆ ನೋಂದಣಿಯಾಗಿದ್ದರು. ಈ ಹಂಗಾಮಿನಲ್ಲಿ 25 ಸಾವಿರಕ್ಕೂ ಹೆಚ್ಚು ವಿಮೆ ನೋಂದಣಿಗೆ ಕ್ರಮ ವಹಿಸಲು ಸೂಕ್ತ ನಿರ್ದೇಶನ ನೀಡಿದರು.

ಮಳೆ ಮತ್ತು ನೀರಾವರಿ ಆಶ್ರಿತ ಪ್ರದೇಶಗಳಲ್ಲಿ ಜೋಳಕ್ಕೆ ಜು. 31 ಹಾಗು ರಾಗಿ ಬೆಳೆಗೆ ಆ. 14 ವಿಮಾ ಕಂತು ಪಾವತಿಗೆ ಕೊನೆಯ ದಿನವಾಗಿದೆ. ತಾಲ್ಲೂಕಿನಲ್ಲಿ ಈವರೆಗೆ 2200 ಹೆಕ್ಟೇರ್‌ನಲ್ಲಿ ಜೋಳ ಬಿತ್ತನೆ ಮಾಡಲಾಗಿದೆ. ಬಿಳಿ ಸುಳಿ ರೋಗ ಬಾಧೆ ಹತೋಟಿಗೆ ಮುಂಜಾಗ್ರತಾ ಕ್ರಮವಾಗಿ ಮಣ್ಣಿನಲ್ಲಿರುವ ರೋಗಾಣುಗಳ ಪ್ರಮಾಣವನ್ನು ಕಡಿಮೆ ಮಾಡಲು ಬೆಳೆಗಳ ಮಧ್ಯ ಅಂತರ ಕಾಪಾಡಿ ಭೂಮಿ ಒಣಗಲು ಬಿಡಬೇಕು. ಪರ್ಯಾಯ ಬೆಳೆಯತ್ತ ರೈತರು ಗಮನ ಹರಿಸಬೇಕು ಎಂದು ತಿಳಿಸಿದರು.

ಕೃಷಿ ಇಲಾಖೆ ಉಪನಿರ್ದೇಶಕಿ ಕೋಕಿಲಾ ಅವರು ಮಾತನಾಡಿ, ಜಿಲ್ಲೆಯಲ್ಲಿ ಶೇ.30 ಮಳೆಯ ಕೊರತೆಯುಂಟಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಮಳೆಯ ಪ್ರಮಾಣವೂ ಕಡಿಮೆ. ಜಿಲ್ಲೆಯಲ್ಲಿ ಬೆಳಗಳಿಗೆ ಶೇ.50 ರಷ್ಟು ರೋಗಬಾಧೆ ಕಾಣಿಸಿಕೊಂಡಿದೆ. ಪ್ರತಿ ಎಕರೆಗೆ ರಾಗಿ ಬೆಳೆಗೆ 404 ರೂ. ವಿಮಾಕಂತು ಪಾವತಿಸಬೇಕು. ಬಿತ್ತನೆ ಬೀಜವನ್ನು ಈಗಾಗಲೇ ಪರೀಕ್ಷೆ ಮಾಡಿ ನೀಡಲಾಗುತ್ತಿದೆ. ಮಣ್ಣಿನ ಮೂಲಕವೂ ರೋಗ ಹರಡುವುದರಿಂದ ನಿಯಂತ್ರಣ ಹತೋಟಿಗೆ ಬರುತ್ತಿಲ್ಲವೆ ಎಂದರು.

ತಾಲ್ಲೂಕು ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಅವರು ಮಾತನಾಡಿ, ರಸಗೊಬ್ಬರ ಮಾರಾಟ ಮಾಡಲು ಸೊಸೈಟಿಗಳಿಗೆ ಅಗತ್ಯ ನೆರವು ಇಲಾಖೆಯಿಂದ ನೀಡಲಾಗುವುದು. ಕಳೆದ ವರ್ಷ 22 ಸಾವಿರ ರೈತರು ಬೆಳೆ ವಿಮೆ ಮಾಡಿಸಿದ್ದು, ಈ ವರ್ಷ 7 ಸಾವಿರ ರೈತರು ಮಾತ್ರ ಮಾಡಿಸಿದ್ದಾರೆ. ಗೊಬ್ಬರ ಮಾರಾಟಕ್ಕೆ ತಾಂತ್ರಿಕ ಸಮಸ್ಯೆಯಿದ್ದರೆ ಪಕ್ಕದ ಸೊಸೈಟಿಗಳ ಮೂಲಕವೂ ತರಿಸಿಕೊಂಡು ಮಾರಾಟ ಮಾಡಬಹುದೆಂದು ಮಾಹಿತಿ ನೀಡಿದರು.

# ಸರ್ಕಾರದ ಬೇಜವಾಬ್ದಾರಿ ವರ್ತನೆ: ಪ್ರತಿಭಟನೆ

• ಪ್ರಜೋದಯ ವರದಿ

## ದೊರೆಯದ ರಸಗೊಬ್ಬರ: ಆಕ್ರೋಶ



ಅರಸೀಕೆರೆ: ರಾಜ್ಯದಲ್ಲಿ ಸರಿಯಾಗಿ ಮಳೆಯಾಗದೆ ಬರಗಾಲ ಉಂಟಾಗುವ ಸೂಚನೆಗಳು ಕಂಡು ಬರುತ್ತಿದ್ದರೂ ರಾಜ್ಯ ಸರ್ಕಾರ ರೈತರ ಬಗ್ಗೆ ಯಾವುದೇ ರೀತಿಯ ಕಾಳಜಿ ವಹಿಸದೆ ಬೇಜವಾಬ್ದಾರಿ ವರ್ತನೆ ತೋರುತ್ತಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿ ರೈತರು ಪ್ರತಿಭಟನೆ ನಡೆಸಿದರು.

ರೈತ ಅನ್ನದಾತ ರೈತ ದೇಶದ ಬೆನ್ನೆಲುಬು ಎಂದು ವೇದಿಕೆಗಳ ಮೇಲೆ ಭಾಷಣ ಮಾಡಿ ರೈತರ ಮತ ಪಡೆದು ಅಧಿಕಾರದ ಗದ್ದುಗೆ ಏರುವ ರಾಜಕಾರಣಿಗಳು ನಂತರ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಹಾಗೂ ಹತ್ತಾರು ತಲೆಮಾರು ಕುಳಿತು ತಿಂದರೂ ಕರಗದಷ್ಟು ಹಣ ಗಳಿಸುವ ಹಪಾಹಪಿತನಕ್ಕೆ ಹೋರಾಡುತ್ತಾರೆ ವಿನಃ ರೈತರ ಬದುಕು ಕಟ್ಟುವ ಕೆಲಸ ಮಾಡುತ್ತಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ (ರಿ) ರೈತ ಶಕ್ತಿ ಸಂಸ್ಥಾಪಕ ಅಧ್ಯಕ್ಷ ನಾಗೇನಹಳ್ಳಿ ದಯಾನಂದ ಅವರು ಆಕ್ರೋಶ ವ್ಯಕ್ತಪಡಿಸಿದರು.

ರೈತರಿಗೆ ರಸಗೊಬ್ಬರ ಸಿಗುತ್ತಿಲ್ಲ, ಪ್ರಾಕೃತಿಕ ವಿಕೋಪಕ್ಕೆ ತುತ್ತಾಗಿ ಬೆಳೆ ಕಳೆದುಕೊಂಡಿರುವ ರೈತರಿಗೆ ಪರಿಹಾರ ಎಂಬುದು ಮರೀಚಿಕೆಯಾಗಿದೆ. ಕೆಎಫ್‌ಸಿಎಸ್‌ಸಿ ವತಿಯಿಂದ ರೈತರಿಂದ ರಾಗಿ ಖರೀದಿ ಮಾಡಿ ಮೂರು ತಿಂಗಳಾದರೂ ರೈತರಿಗೆ ಇನ್ನೂ ಹಣ ಸೇರಿಲ್ಲ. ಇದನ್ನು ಪ್ರಶ್ನಿಸಿದರೆ ಅಧಿಕಾರಿಗಳಿಂದ ಸಮರ್ಪಕ ಉತ್ತರ ದೊರೆಯುತ್ತಿಲ್ಲ, ಪರಿಸ್ಥಿತಿ ಹೀಗಿದ್ದರೂ ತಾಲ್ಲೂಕು ಹಾಗೂ ಜಿಲ್ಲಾಡಳಿತ ಕಣ್ಮುಚ್ಚಿ ಕುಳಿತಿದ್ದು ಶಾಸಕಾಂಗ ಹಾಗೂ ಕಾರ್ಯಾಂಗ ರೈತರ ಬಗ್ಗೆ ಹೊಂದಿರುವ ಕಾಳಜಿ ತೋರುತ್ತದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ತಾಲ್ಲೂಕಿನ ರೈತರಿಗಾಗುತ್ತಿರುವ ಅನ್ಯಾಯವನ್ನು ಸರಿಪಡಿಸುವಂತೆ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತವನ್ನು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ (ರಿ) ರೈತ ಶಕ್ತಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ಹಾಸನಕ್ಕೆ ತೆರಳುತ್ತಿರುವುದಾಗಿ ತಿಳಿಸಿದರು.


ಇದಕ್ಕೂ ಮುನ್ನ ನೂರಾರು ಸಂಖ್ಯೆಯಲ್ಲಿ ನಗರದ ಪಿಪಿ ವೃತ್ತದಲ್ಲಿ ಸೇರಿದ ರೈತ ಸಂಘಟನೆಯ ಮುಖಂಡರು ರೈತರ ಪರ ಜಯ ಘೋಷ ಕೂಗುತ್ತ ಸರ್ಕಾರದ ವಿರುದ್ಧ ಘೋಷಣೆ ಕೂಗುವ ಮೂಲಕ ಗಮನ ಸೆಳೆದರು.

ಈ ಸಂದರ್ಭದಲ್ಲಿ ಯುವ ಘಟಕದ ಅಧ್ಯಕ್ಷ ನಿತಿನ್‌ಗೌಡ, ಮಹಿಳಾ ಘಟಕದ ಅಧ್ಯಕ್ಷೆ ಹೇಮಾ, ರೈತ ಸಂಘದ ಜಂಟಿ ಕಾರ್ಯದರ್ಶಿ ಲೋಕೇಶ್, ಕೆರೆ ಕೋಡಿಹಳ್ಳಿ, ರೈತ ಮುಖಂಡರಾದ ಕೆಲ್ಲಂಗೆರೆ ರಘು, ದಿನೇಶ್, ಬಸವರಾಜ್, ಮಂಜುನಾಥ್ ಸೇರಿದಂತೆ ಮತ್ತು ಇತರರು ಪಾಲ್ಗೊಂಡಿದ್ದರು.

# ಇರಾನ್ ಮೇಲೆ ಅಮೆರಿಕ ವಾಯು ದಾಳಿ: 37 ಮಂದಿ ಸಾವು

• ಪ್ರಜೋದಯ ವರದಿ

## ಇಂಧನ ರಫ್ತು ಸಂಪೂರ್ಣ ಸ್ಥಗಿತ: ಇರಾನ್



**ಟೆಹ್ರಾನ್/ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಿಚ್ಚು ಮತ್ತೆ ಜೋರಾಗಿದೆ. ಇರಾನ್ ಮೇಲಿನ ನೌಕಾ ದಿಗ್ಬಂಧನವನ್ನು ಪುನರಾರಂಭಿಸಿರುವ ಅಮೆರಿಕ, ತನ್ನ ವೈಮಾನಿಕ ದಾಳಿಯನ್ನು ತೀವ್ರಗೊಳಿಸಿದೆ. ಅಮೆರಿಕ ನಡೆಸಿದ ವಾಯುದಾಳಿಗಳಲ್ಲಿ ಕನಿಷ್ಠ 35 ಜನರು ಸಾವನ್ನಪ್ಪಿದ್ದು, ದಾಳಿಯಲ್ಲಿ 72ಕ್ಕೂ ಹೆಚ್ಚು ಜನರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಇರಾನ್ ಆರೋಗ್ಯ ಸಚಿವಾಲಯದ ವಕ್ತಾರ ಹೊಸೈನ್ ಕೆರ್ಮನ್‌ಪುರ್ ತಿಳಿಸಿದ್ದಾರೆ.

ಇದಕ್ಕೆ ಪ್ರತಿಯಾಗಿ, ತೈಲ ಸಾಗಣೆಯ ಜಾಗತಿಕ ಜೀವನಾಡಿಯಾಗಿರುವ ಪರ್ಷಿಯನ್ ಕೊಲ್ಲಿಯಿಂದ ಇತರ ದೇಶಗಳ ಇಂಧನ ರಫ್ತನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವುದಾಗಿ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಎಚ್ಚರಿಕೆ ನೀಡಿದೆ.

ಇರಾನ್‌ನ ಪರಮಾಣು ಕಾರ್ಯಕ್ರಮ ಮತ್ತು ಪ್ರಾದೇಶಿಕ ಭದ್ರತೆಯ ಕುರಿತು ಮಾತುಕತೆ ನಡೆಸಲು 60 ದಿನಗಳ ಅವಧಿಗೆ ಉಭಯ ದೇಶಗಳ ನಡುವೆ ತಾತ್ಕಾಲಿಕ ಕದನ ವಿರಾಮ ಘೋಷಿಸಲಾಗಿತ್ತು. ಅಮೆರಿಕ ಕಳೆದ ತಿಂಗಳಷ್ಟೇ ತನ್ನ ನೌಕಾ ದಿಗ್ಬಂಧನವನ್ನು ತೆರವು ಗೊಳಿಸಿತ್ತು.

ಆದರೆ, ಹೊರ್ಮುಜ್ ಜಲಸಂಧಿಯಲ್ಲಿ ಇರಾನ್ ನಡೆಸಿದ ಹಡಗುಗಳ ಮೇಲಿನ ದಾಳಿಯಿಂದಾಗಿ ಈ ಶಾಂತಿ ಪ್ರಕ್ರಿಯೆ ಸಂಪೂರ್ಣ ಮುರಿದು ಬಿದ್ದಿದ್ದು, ಅಮೆರಿಕ ಮತ್ತೆ ದಿಗ್ಬಂಧನವನ್ನು ಜಾರಿಗೆ ತಂದಿದೆ. ಅಮೆರಿಕದ ಇತ್ತೀಚಿನ ದಾಳಿಯಲ್ಲಿ ಇರಾನ್ ಸೇನಾ ಬ್ಯಾರಕ್‌ಗಳು ಧ್ವಂಸಗೊಂಡಿದ್ದು, ನೂರಾರು ಜನ ಗಾಯಗೊಂಡಿದ್ದಾರೆ ಎಂದು ಇರಾನ್ ಅಧಿಕಾರಿಗಳು ತಿಳಿಸಿದ್ದಾರೆ.

# ನೂತನ ಸರ್ಕಾರಿ ಪ್ರೌಢಶಾಲೆ ಆರಂಭ: ವಿದ್ಯಾರ್ಥಿಗಳ ಸಂಭ್ರಮ

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನ ಗಡಿ ಭಾಗದ ಲಕ್ಕೂರು ಗ್ರಾಮದಲ್ಲಿ ನೂತನವಾಗಿ ಆರಂಭ ಗೊಂಡಿರುವ ಸರ್ಕಾರಿ ಪ್ರೌಢಶಾಲೆಯ ಉದ್ಘಾಟನಾ ಸಮಾರಂಭ ಲಕ್ಕೂರು ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು, ವಿದ್ಯಾರ್ಥಿಗಳಲ್ಲಿ ಸಂಭ್ರಮ ಮನೆ ಮಾಡಿತು.

ಈ ಭಾಗದಲ್ಲಿ ಹನ್ಯಾಳು ಸರ್ಕಾರಿ ಪ್ರೌಢಶಾಲೆ ಹೊರತುಪಡಿಸಿದರೆ ರಾಗಿ ಮರೂರು ಗ್ರಾಮದಲ್ಲಿ ಅನುದಾನಿತ ಪ್ರೌಢಶಾಲೆ ಕಾರ್ಯ ನಿರ್ವಹಿಸುತ್ತಿತ್ತು. ಇದರಿಂದ ಈ ಭಾಗದಲ್ಲಿ ಬರುವ ಹತ್ತಕ್ಕೂ ಹೆಚ್ಚಿನ ಗ್ರಾಮಗಳ ವಿದ್ಯಾರ್ಥಿಗಳು ಪ್ರೌಢಶಾಲೆಗೆ 2 ಕಿ.ಮೀ. ದೂರ ಸಂಚರಿಸಿ ರಾಗಿಮರೂರು ಅಥವಾ ಹನ್ಯಾಳು ಸರ್ಕಾರಿ ಪ್ರೌಢಶಾಲೆಗೆ ಬರಬೇಕಿದ್ದ ಸಂಕಷ್ಟದ ಪರಿಸ್ಥಿತಿ ಉಂಟಾಗಿತ್ತು. ಹಲವು ಬಾರಿ ಲಕ್ಕೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಆರಂಭಿಸು ವಂತೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನಪಟ್ಟರೂ ಅಡೆತಡೆಗಳು ಎದುರಾಗುತ್ತಿದ್ದವು.

ಈ ಬಾರಿ ಶಾಸಕ ಎ.ಮಂಜು ಅವರ ದಿಟ್ಟ ಹೋರಾಟ ಮತ್ತು ಗ್ರಾಮಸ್ಥರ ಸಹಕಾರದಿಂದ ಜಿಲ್ಲೆಯಲ್ಲಿಯೇ ಈ ಸಾಲಿಗೆ ಏಕೈಕ ಲಕ್ಕೂರು ಗ್ರಾಮಕ್ಕೆ ಸರಕಾರಿ ಪ್ರೌಢಶಾಲೆಯನ್ನು ಮಂಜೂರಾತಿ ಮಾಡಿಸಿ ಬುಧವಾರ ಶಾಲೆ ಆರಂಭಕ್ಕೆ ಚಾಲನೆ ನೀಡಿದ್ದಾರೆ. ಲಕ್ಕೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂರಕ್ಕೂ ಹೆಚ್ಚಿನ ಮಕ್ಕಳು ಇದ್ದು, 7ನೇ ತರಗತಿ ನಂತರ ದೂರದ ರಾಗಿಮರೂರು ಅಥವಾ ಹನ್ಯಾಳು ಶಾಲೆಗೆ ಬರಬೇಕಿತ್ತು. ಈಗ ಆ ಸಮಸ್ಯೆಗೆ ಪರಿಹಾರ ದೊರೆತಿದೆ, ಸುಮಾರು 30 ಕ್ಕೂ ಹೆಚ್ಚಿನ ಮಕ್ಕಳು 8ನೇ ತರಗತಿಗೆ ಪ್ರವೇಶಾತಿ ಹೊಂದಿದ್ದಾರೆ.

ಶಾಲಾ ಉದ್ಘಾಟನಾ ಸಮಾರಂಭದಲ್ಲಿ ಲಕ್ಕೂರು, ಕೊಪ್ಪಲು, ಸೋಮಪುರ, ಕೆರಗೋಡು ಗ್ರಾಮಗಳ ಮಕ್ಕಳು, ಪೋಷಕರು, ಸಾರ್ವಜನಿಕರು, ಮಹಿಳೆಯರು ಭಾಗವಹಿಸಿ ಸಂಭ್ರಮಿಸಿದರು. ಕಾರ್ಯಕ್ರಮ ಆರಂಭಕ್ಕೂ ಮುನ್ನಾ ಶಾಲೆಯ 50ಕ್ಕೂ ಹೆಚ್ಚಿನ ವಿದ್ಯಾರ್ಥಿನಿಯರು ಕುಂಭ ಕಳಸಗಳನ್ನು ತಲೆ ಮೇಲೆ ಒತ್ತು ವಾದ್ಯ ದೊಂದಿಗೆ ಹೆಜ್ಜೆ ಹಾಕಿದರು. ಶಾಸಕ ಎ.ಮಂಜು ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರು, ಸಾರ್ವಜನಿಕರು ಇದ್ದರು.

ಶಾಸಕ ಎ.ಮಂಜು ಅವರು ಮಾತನಾಡಿ, ಹತ್ತಾರು ಬಾರಿ ಲಕ್ಕೂರು ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆ ಮಂಜೂರಾತಿಗೆ ಮುಂದಾದರೂ ಕಾಣದ ವಿಘ್ನಗಳು ಎದುರಾಗುತ್ತಿದ್ದವು. ಈ ಬಾರಿ ಗ್ರಾಮದ ಕೆಲವು ಮುಖಂಡರು ನನ್ನನ್ನು ಬೆನ್ನತ್ತಿ ಶಾಲೆ ಮಂಜೂರಾತಿಗೆ ಶ್ರಮಪಟ್ಟಿದ್ದಾರೆ. ಹಾಸನ ಜಿಲ್ಲೆಯಲ್ಲಿಯೇ ಲಕ್ಕೂರು ಗ್ರಾಮಕ್ಕೆ ಮಾತ್ರ ಪ್ರೌಢಶಾಲೆ ಆರಂಭಕ್ಕೆ ಮಂಜೂರಾತಿ ಸಿಕ್ಕಿದೆ. ಇದೇ ಆಸಕ್ತಿ ಮುಂದಿನ ವರ್ಷಗಳಲ್ಲಿ ಶಾಲೆಯನ್ನು ನಡೆಸಿಕೊಂಡು ಹೋಗುವ ಮನಸ್ಸನ್ನು ಜನರು ಮಾಡಬೇಕು. ಮಕ್ಕಳ ಸಂಖ್ಯೆ ಇಳಿಕೆ ಕಂಡು ಶಾಲೆಗಳನ್ನು ಮುಚ್ಚುವ ಸಂದರ್ಭದಲ್ಲಿ ಕಷ್ಟಪಟ್ಟು ಈ ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆಯನ್ನು ತೆರೆಯಲಾಗಿದೆ. ಯಾವುದೇ ಆಸೆ ಆಮಿಷಗಳಿಗೆ ಜನರು ಮರುಳಾಗದೇ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿ ಸೌಕರ್ಯ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ನಾರಾಯಣ, ಅಕ್ಷರ ದಾಸೋಹ ಅಧಿಕಾರಿ ರಂಗಸ್ವಾಮಿ, ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಕುಮಾರ್, ಪೋಷಕರು ಇದ್ದರು.

## ಇಂದು ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿ ತಟ್ಟೇಕೆರೆ (ಮಂಗಳಾಪುರ) ಗ್ರಾಮದಲ್ಲಿ 2 x 12.5 ಎಮ್.ವಿ.ಎ, 66/11 ಕೆ.ವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಯ 66 ಕೆ.ವಿ ವಿದ್ಯುತ್ ಮಾರ್ಗದ ಕಾಮಗಾರಿಗೆ ಸಂಬಂಧಿಸಿದಂತೆ ಒಂದು ಸಂಖ್ಯೆ 110ಕೆ.ವಿ ಡಿ.ಸಿ ಟವರ್ ನಿರ್ಮಾಣ ಮತ್ತು ವಾಹಕ ಜೋಡಣೆ ಕಾಮಗಾರಿ ನಿರ್ವಹಿಸಲು 66 ಕೆ.ವಿ ಕಡವಿ ಕೋಟೆ- ಹಡವನಹಳ್ಳಿ ಹಾಗೂ 66ಕೆ.ವಿ ಕಡವಿಕೋಟೆ-ಸಿಂಗಾಪುರ ವಿದ್ಯುತ್ ಮಾರ್ಗದ ಮಾರ್ಗ ಮುಕ್ತತೆ ತೆಗೆದುಕೊಳ್ಳುವುದರಿಂದ ಜು.17 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗು ವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಯೋಜನೆಗಳ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

# 62 ಸಾವಿರ ಕೋ. ರೂ. ಮೌಲ್ಯದ ಯೋಜನೆಗೆ ಕೇಂದ್ರ ಅಸ್ತು

• ಪ್ರಜೋದಯ ವರದಿ



**ನವದೆಹಲಿ:** ಕೇಂದ್ರ ಸಚಿವ ಸಂಪುಟವು 62,500 ಕೋಟಿ ರೂ. ಮೌಲ್ಯದ ಹೊಸ ಮೊಬೈಲ್ ಉತ್ಪಾದನಾ ಯೋಜನೆಗೆ ಅನುಮೋದನೆ ನೀಡಿದೆ. ಇದು ಈಗಾಗಲೇ ಯಶಸ್ವಿಯಾಗಿರುವ ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್ (ಉತ್ಪಾದನೆ ಸಂಬಂಧಿತ ಪ್ರೋತ್ಸಾಹ ಧನ) ಯೋಜನೆಯ ಮುಂದುವರಿದ ಭಾಗವಾಗಿದ್ದು, ಮುಂದಿನ 5 ವರ್ಷಗಳ ಕಾಲ ಜಾರಿಯಲ್ಲಿರಲಿದೆ.

ಈ ಹಿಂದೆ ಜಾರಿಯಲ್ಲಿದ್ದ ಯೋಜನೆಯಿಂದ ಆ್ಯಪಲ್ ಸೇರಿದಂತೆ ಹಲವು ಜಾಗತಿಕ ಕಂಪನಿಗಳು ಭಾರತದಲ್ಲೇ ಮೊಬೈಲ್ ಉತ್ಪಾದನೆ ಆರಂಭಿಸಿದ್ದವು. ಅದರ ಪರಿಣಾಮವಾಗಿ ಸ್ಮಾರ್ಟ್‌ಫೋನ್‌ಗಳು ಭಾರತದ ಪ್ರಮುಖ ರಫ್ತು ಉತ್ಪನ್ನಗಳಲ್ಲೊಂದು ಎಂಬ ಹೆಗ್ಗಳಿಕೆಯನ್ನೂ ಪಡೆದುಕೊಂಡಿದೆ. ಇದರಿಂದ ಭಾರತದಲ್ಲಿ ಮೊಬೈಲ್ ಉತ್ಪಾದನೆಯ ಸ್ಥಳೀಯ ಮೌಲ್ಯವರ್ಧನೆ 24% ಏರಿಕೆಯಾಗಿದೆ.

ಈ ಹೊಸ ಯೋಜನೆಯಲ್ಲಿ ಸ್ಥಳೀಯವಾಗಿ ಬಿಡಿಭಾಗಗಳ ಖರೀದಿ, ಭಾರತೀಯ ಬ್ರ್ಯಾಂಡ್‌ಗಳ ವಿನ್ಯಾಸ ಮತ್ತು ಸಂಶೋಧನೆ ಹಾಗೂ ಮೊಬೈಲ್ ರಫ್ತುಗೆ ವಿಶೇಷ ಪ್ರೋತ್ಸಾಹ ನೀಡಲಾಗಿದೆ ಎಂದು ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಹೆಚ್ಚುವರಿ ಸಹಾಯಧನ ಯೋಜನೆಯಡಿ ಭಾರತದಲ್ಲೇ ತಯಾರಾಗುವ ಮೊಬೈಲ್‌ಗಳ ಮಾರಾಟದ ಮೇಲೆ 2.25% ನಿಂದ 5% ರವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇದಲ್ಲದೆ, ಪ್ರಮುಖ ಅಥವಾ ಬಿಡಿಭಾಗಗಳನ್ನು ದೇಶೀಯವಾಗಿ ಖರೀದಿಸಿದರೆ ಹೆಚ್ಚುವರಿಯಾಗಿ 1.5% ವರೆಗೆ ಪ್ರೋತ್ಸಾಹಧನವನ್ನೂ ಒದಗಿಸಲಾಗುತ್ತದೆ.

ಭಾರತೀಯ ಬ್ರ್ಯಾಂಡ್‌ಗಳು ಸ್ವಂತ ವಿನ್ಯಾಸ ಮತ್ತು ಸಂಶೋಧನೆಗೆ ಉತ್ತೇಜನ ನೀಡುವುದರಿಂದ 3% ಹೆಚ್ಚುವರಿ ಪ್ರೋತ್ಸಾಹಧನ ಕೂಡ ನೀಡಲಾಗುತ್ತದೆ. 39 ಲಕ್ಷ ಕೋಟಿ ಮೌಲ್ಯದ ಮೊಬೈಲ್ ಉತ್ಪಾದನೆ ಗುರಿ ಈ ಯೋಜನೆಯ ಮೂಲಕ 5 ವರ್ಷಗಳಲ್ಲಿ 39 ಲಕ್ಷ ಕೋಟಿ ಮೌಲ್ಯದ ಮೊಬೈಲ್ ಉತ್ಪಾದನೆ ಸಾಧಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಹಿಂದಿನ ಯೋಜನೆಯಡಿ 22 ಲಕ್ಷ ಕೋಟಿ ಮೌಲ್ಯದ ಉತ್ಪಾದನೆ ದಾಖಲಾಗಿತ್ತು.

ಇದೇ ಅವಧಿಯಲ್ಲಿ 60 ಸಾವಿರ ನೇರ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯನ್ನು ಸರ್ಕಾರ ಹೊಂದಿದೆ. ಹಿಂದಿನ ಯೋಜನೆಯಿಂದ ಸುಮಾರು 2 ಲಕ್ಷ ಉದ್ಯೋಗಗಳು ನಿರ್ಮಾಣವಾಗಿದ್ದವು. ಕೇಂದ್ರ ಸರ್ಕಾರದ ಮಾಹಿತಿ ಪ್ರಕಾರ, ಹಿಂದೆ (ಉತ್ಪಾದನೆ ಸಂಬಂಧಿತ ಪ್ರೋತ್ಸಾಹಧನ) ಯೋಜನೆಯಡಿ 19 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಪ್ರೋತ್ಸಾ ಹಧನ ವಿತರಿಸಲಾಗಿತ್ತು. ಅದರಿಂದ ಸರ್ಕಾರಕ್ಕೆ 25 ಸಾವಿರ ಕೋಟಿ ರೂ. ನೇರ ತೆರಿಗೆ ಹಾಗೂ ಸುಮಾರು 3 ಲಕ್ಷ ಕೋಟಿ ರೂ. ಆದಾಯ ಲಭಿಸಿದೆ. ಸದ್ಯ ಯೋಜನೆಯಡಿ 20 ಸಾವಿರ ಕೋಟಿ ರೂ.ಗಳಿಗೂ ಅಧಿಕ ಹೂಡಿಕೆ ಹರಿದುಬಂದಿದ್ದು, ಆರಂಭಿಕ ಗುರಿಗಿಂತ 3 ಪಟ್ಟು ಹೆಚ್ಚು ಸಾಧನೆ ಕಂಡಿದೆ.

ಸ್ಮಾರ್ಟ್‌ಫೋನ್ ಉತ್ಪಾದನೆ 11.61 ಲಕ್ಷ ಕೋಟಿ ರೂ.ಗಳಿಗೆ ತಲುಪಿದ್ದು, ನಿಗದಿಪಡಿಸಿದ್ದ ಗುರಿಗಿಂತ 142% ಹೆಚ್ಚು ಸಾಧನೆಯಾಗಿದೆ. ಇಂಡಿಯನ್ ಸೆಲ್ಯುಲರ್ ಅಂಡ್ ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಪಂಕಜ್ ಮಹೀಂದ್ರೂ ಅವರ ಪ್ರಕಾರ, ಭಾರತದ ಜಾಗತಿಕ ಮೊಬೈಲ್ ಉತ್ಪಾದನೆಯ ಪಾಲನ್ನು 35 ರಿಂದ 40%ಗೆ ಹೆಚ್ಚಿಸುವ ಗುರಿ ಹೊಂದಿದೆ.

# ಗ್ಯಾರಂಟಿ ಯೋಜನಾ ಸಮಿತಿ ಜಿಲ್ಲಾಧ್ಯಕ್ಷರಾಗಿ ರಂಜಿತ್ ನೇಮಕ

• ಪ್ರಜೋದಯ ವರದಿ



**ಹಾಸನ:** ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷರಾಗಿ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾದರೂ ಹಾಸನ ಜಿಲ್ಲಾ ಗ್ಯಾರಂಟಿ ಸಮಿತಿಗೆ ಅಧ್ಯಕ್ಷರ ನೇಮಕವಾಗಿರಲಿಲ್ಲ. ಈ ಹುದ್ದೆಗೆ ಹಲವು ಮುಖಂಡರು ಆಕಾಂಕ್ಷಿಗಳಾಗಿದ್ದು, ಶೀಘ್ರ ನೇಮಕಾತಿಗೆ ಪಕ್ಷದೊಳಗೆಯೇ ಒತ್ತಾಯಗಳು ಕೇಳಿ ಬಂದಿದ್ದವು. ಈ ಬೆಳವಣಿಗೆಗಳ ನಡುವೆ ಗ್ಯಾರಂಟಿ ಸಮಿತಿ ರಾಜ್ಯಾಧ್ಯಕ್ಷ ಹೆಚ್.ಎಂ. ರೇವಣ್ಣ ಅವರು ರಂಜಿತ್ ಗೊರೂರು ಅವರನ್ನು ಜಿಲ್ಲಾ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಯುವ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷರಾಗಿ ಸತತ ಎರಡನೇ ಅವಧಿಗೆ ಕಾರ್ಯನಿರ್ವಹಿಸುತ್ತಿರುವ ರಂಜಿತ್ ಗೊರೂರು, ಪಕ್ಷದ ಸಂಘಟನೆ ಹಾಗು ಜನಪರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ನಾಯಕರಾಗಿದ್ದಾರೆ. ಅವರ ನೇಮಕದಿಂದ ಗ್ಯಾರಂಟಿ ಯೋಜನೆಗಳ ಕುರಿತು ಜನಜಾಗೃತಿ ಮತ್ತು ಸಮನ್ವಯ ಕಾರ್ಯಗಳು ಮತ್ತಷ್ಟು ಚುರುಕುಗೊಳ್ಳಲಿವೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಹಲವು ಆಕಾಂಕ್ಷಿಗಳಿದ್ದರೂ, ರಂಜಿತ್ ಗೊರೂರು ಅವರಿಗೆ ಅವಕಾಶ ದೊರೆತಿರುವುದು ಕುತೂಹಲ ಮೂಡಿಸಿದೆ.

# ಹುಲಿಕಲ್ಲು ಗ್ರಾಮದಲ್ಲಿ ವನಮಹೋತ್ಸವ

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನ ಹುಲಿಕಲ್ಲು ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಶಾಲೆಯ ಇಕೋ ಕ್ಲಬ್ ಮತ್ತು ಸಾಮಾಜಿಕ ಅರಣ್ಯ ಇಲಾಖೆ ವತಿಯಿಂದ ಗುರುವಾರ ವಿವಿಧ ಗಿಡಗಳನ್ನು ನೆಡುವ ಮೂಲಕ ವನಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.

ಸಾಮಾಜಿಕ ಅರಣ್ಯ ಇಲಾಖೆ ವಲಯ ಅರಣ್ಯಾಧಿಕಾರಿ ರಶ್ಮೀ ಪೂಜಾರ್ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಶಾಲಾ- ಕಾಲೇಜು ಆವರಣದಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಿದರೆ ಅದು ವಿದ್ಯಾರ್ಥಿಗಳಲ್ಲಿ ಪರಿಸರ ರಕ್ಷಣೆ ಮತ್ತು ಉಳಿವು ಕುರಿತು ಜಾಗೃತಿ ಮೂಡಲಿದೆ. ಮುಂದಿನ ದಿನಗಳಲ್ಲಿ ಇದೇ ಶಾಲಾ ಆವರಣದಲ್ಲಿ ಹೆಚ್ಚಿನ ಗಿಡಗಳನ್ನು ನೆಟ್ಟು ವನಮಹೋತ್ಸವ ಆಚರಣೆಯನ್ನು ಅರ್ಥಪೂರ್ಣವಾಗಿ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

ಅರಣ್ಯಾಧಿಕಾರಿ ಗುರುರಾಜ್ ಅವರು ಮಾತನಾಡಿ, ಹುಲಿಕಲ್ಲು ಸರ್ಕಾರಿ ಪ್ರೌಢಶಾಲೆ ವಿಶಾಲವಾದ ಆವರಣವನ್ನು ಹೊಂದಿದೆ. ಇಲ್ಲಿ ಪರಿಸರಕ್ಕೆ ಪೂರಕವಾದ ಗಿಡಗಳನ್ನು ನೆಡಲಾಗಿದ್ದು, ಇವುಗಳನ್ನು ಪೋಷಣೆ ಮಾಡುವ ನಿಟ್ಟಿನಲ್ಲಿ ಪ್ರತಿ ವಿದ್ಯಾರ್ಥಿಗಳು ತಮ್ಮ ಪರಿಸರ ಕಾಳಜಿಯನ್ನು ಹೊಂದಬೇಕೆಂದು ತಿಳಿಸಿದರು.

ಮುಖ್ಯ ಶಿಕ್ಷಕ ಯೋಗೀಶ್ವರ ಅವರು ಮಾತನಾಡಿ, ಅರಣ್ಯ ಇಲಾಖೆ ವತಿಯಿಂದ ನಮ್ಮ ಶಾಲೆಗೆ ಹೆಚ್ಚಿನ ಗಿಡಗಳನ್ನು ನೆಡುವ ಮೂಲಕ ಶಾಲೆಯ ವಾತಾವರಣವನ್ನು ಪರಿಸರಮುಕ್ತವಾಗಿ ನಿರ್ಮಿಸಬೇಕೆಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಕುಮಾರ್, ಸಹ ಶಿಕ್ಷಕರಾದ ಆರ್.ಶಾರದ, ಶೃತಿ, ರೂಪ, ಜಗದೀಶ್, ಸುಮಂತ್, ಭವ್ಯ, ಮಂಜು, ಪ್ರಮೋದ್, ಇಲಾಖೆ ಸಿಬ್ಬಂದಿಗಳು, ವಿದ್ಯಾರ್ಥಿಗಳು ಇದ್ದರು.

# ಸೆ.25ರಂದು ಮೆಚ್ಯೂರ್ಡ್ ಲವ್ ಸ್ಟೋರಿ ಸಿನಿಮಾ ತೆರೆಗೆ



• ಪ್ರಜೋದಯ ವರದಿ

**ಹಾಸನ:** ಹದಿಹರೆಯದ ವಯಸ್ಸಿನಲ್ಲಿ ಯುವಕ- ಯುವತಿಯರಲ್ಲಿ ಶುರುವಾಗುವ ಪ್ರೀತಿ, ಬಾಂಧವ್ಯ ಹಾಗು ಸವಾಲುಗಳ ಕಥೆಯನ್ನು ಹೊಂದಿರುವ ಮೆಚ್ಯೂರ್ಡ್ ಲವ್ ಸ್ಟೋರಿ ಸಿನಿಮಾ ಸೆ. 25ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ನಾಯಕ ನಟ ಸಿ.ಎಸ್.ಮನೀಷ್‌ಗೌಡ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಸಿನಿಮಾಗೆ ಸಿ.ಪಿ.ಮನುರಾಜು ನಿರ್ಮಾಣದ ಸಿನಿಮಾ ಇದಾಗಿದ್ದು, ರಘು ನಿರ್ದೇಶನ ಮಾಡಿದ್ದಾರೆ. ನಾಗರಾಜು ಅವರ ಛಾಯಾಗ್ರಹಣವಿದ್ದು, ಬಿ.ಜಿ. ಮಿಹರ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆಂದರು.

ಬೆಂಗಳೂರು, ಮಂಡ್ಯ ಮತ್ತು ಸಕಲೇಶಪುರ ಸೇರಿ ವಿವಿಧೆಡೆ ಚಿತ್ರೀಕರಣ ಮಾಡಲಾಗಿದೆ. ಪ್ರೀತಿ, ಪ್ರೇಮದ ಜೊತೆಗೆ ಚಿತ್ರದಲ್ಲಿ ತಾಯಿ ವಾತ್ಸಲ್ಯ, ಒಳ್ಳೆಯ ಸಂದೇಶವು ಇದೆ ಎಂದು ಹೇಳಿದರು.

ಕನ್ನಡ ಚಿತ್ರರಂಗದಲ್ಲಿ ಯುವ ಕಲಾವಿದರಿಗೆ ಸೂಕ್ತ ವೇದಿಕೆ ಬೇಕಿದ್ದು, ಅದಕ್ಕಾಗಿ ನಟ ಕಿಚ್ಚ ಸುದೀಪ್ ಅವರಂಥವರು ಆಸಕ್ತಿ ವಹಿಸಬೇಕು. ಪ್ರತಿ ವಾರ ಅನೇಕ ಸಿನಿಮಾಗಳು ಬಿಡುಗಡೆಯಾದರೂ ಪ್ರೇಕ್ಷಕರ ಸೆಳೆಯುವಲ್ಲಿ ವಿಫಲವಾಗುತ್ತಿವೆ. ಚಲನಚಿತ್ರ ನಿರ್ಮಾಣಕ್ಕಿಂತ ಅದನ್ನು ಜನರಿಗೆ ತಲುಪಿಸುವುದು ಇತ್ತೀಚಿನ ದಿನಗಳಲ್ಲಿ ಸವಾಲಾಗಿ ಪರಿಣಮಿಸಿದೆ. ಒಳ್ಳೆಯ ಚಿತ್ರಗಳಿಗೆ ಪ್ರೋತ್ಸಾಹ ನೀಡಬೇಕೆಂದು ಕೋರಿದರು.

ಖಳ ನಾಯಕ ಮಂಜು ಅವರು ಮಾತನಾಡಿ, ಈ ಸಿನಿಮಾದಲ್ಲಿ ನನಗೆ ಚಾಲೆಂಜಿಂಗ್ ಪಾತ್ರ ಸಿಕ್ಕಿದೆ. ಅನ್ಯಭಾಷೆಯ ವಿಲನ್ ಪಾತ್ರ ಮಾಡಿದ್ದು ಎಲ್ಲರೂ ಸಹಕಾರ ನೀಡಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಾಹಸ ಕಲಾವಿದ ಗಿರೀಶ್ ಇದ್ದರು.

## ಬಿತ್ತನೆ ಕಾರ್ಯ ಶೇ.90 ರಷ್ಟು ಪೂರ್ಣ | ರೋಗ ಬಾಧೆ ಸಂಭವ

# ಆಲೂಗೆಡ್ಡೆ: ರೈತರು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು

• ಪ್ರಜೋದಯ ವರದಿ



**ಹಾಸನ:** ತಾಲ್ಲೂಕಿನಾದ್ಯಂತ ಆಲೂಗಡ್ಡೆ ಬೆಳೆಯುವ ಬಹುತೇಕ ಭಾಗಗಳಲ್ಲಿ ಮಳೆಯಾಗಿದ್ದು, ಆಲೂಗಡ್ಡೆ ಬಿತ್ತನೆ ಕಾರ್ಯವು ಶೇ.90ರಷ್ಟು ಪೂರ್ಣಗೊಂಡಿದೆ, ಜುಲೈ ಮಾಹೆಯಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಮುನ್ಸೂಚನೆಯಿದ್ದು, ಕೀಟ ಹಾಗೂ ರೋಗಗಳ ಬಾಧೆ ಕಂಡು ಬರುವ ಸಂಭವವಿರುತ್ತದೆ ಎಂದು ಜಿಲ್ಲಾ ಪಂಚಾಯಿತಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

ಆಲೂಗಡ್ಡೆ ಬಿತ್ತನೆ ಮಾಡಿರುವ ರೈತರುಗಳು, ಬೆಳೆಗೆ ಬಿತ್ತನೆಯಾದ 10 ದಿವಸಗಳ ನಂತರ ಗೆಡ್ಡೆಗಳು ಚಿಗುರೊಡೆದಿರುವ ಬಗ್ಗೆ ಪರಿಶೀಲಿಸಿ, ಗೆಡ್ಡೆಗಳು ಕೊಳೆತಿರುವ ಹಾಗೂ ಮೊಳಕೆ ಒಡೆಯದಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು, ಗೆಡ್ಡೆಗಳು ಕೊಳೆತಿದ್ದಲ್ಲಿ ಅಂತಹ ಗೆಡ್ಡೆಗಳನ್ನು ತೆಗೆದು ನಾಶಪಡಿಸಬೇಕು, ಮಳೆ ನೀರು ನಿಲ್ಲುವಂತಹ ಜಾಗದಲ್ಲಿ ನೀರು ಬಸಿದು ಹೋಗುವಂತೆ ನೋಡಿಕೊಳ್ಳಬೇಕು, ಮಳೆನೀರು ನಿಲ್ಲುವಂತಾದರೆ ಗೆಡ್ಡೆಗಳು ಕೊಳೆತು ಹೋಗುವ ಸಂಭವವಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಮೋಡ ಕವಿದು ಮಳೆಯಿಂದಾಗಿ ವಾತಾವರಣವು ತಂಪಾಗಿರುವುದರಿಂದ ಹಾಗೂ ಭಾಗಶಃ ಬಿಸಿಲು ಬರುತ್ತಿರುವುದರಿಂದ ಅಂಗಮಾರಿ ರೋಗ ಹಾಗೂ ರಸ ಹೀರುವ ಕೀಟಗಳ ಹಾವಳಿಯಿಂದ ನಂಜಾಣು ರೋಗ ಹರಡುವ ಸಾಧ್ಯತೆ ಇರುವುದರಿಂದ ಬಿತ್ತನೆಯಾದ ನಂತರ ಬೆಳೆಯ ವಿವಿಧ ಹಂತಗಳಲ್ಲಿ ರೈತರು ಕೈಗೊಳ್ಳಬೇಕಾದ ಸಸ್ಯ ಸಂರಕ್ಷಣಾ ಕ್ರಮಗಳು ಹಾಗೂ ಬೇಸಾಯ ಚಟುವಟಿಕೆಗಳು ಈ ಕೆಳಗಿನಂತಿರುತ್ತದೆ.

ಬಿತ್ತನೆಯಾದ 25-30 ದಿನಗಳ ಬೆಳೆಗೆ ಒಂದು ಲೀಟರ್ ನೀರಿಗೆ ಮ್ಯಾಂಕೋಜೆಬ್ 3 ಗ್ರಾಂ+ ಡೈಮಿಥೋಯೆಟ್ 1.70 ಮಿ.ಲೀ. ಅಥವಾ ಮ್ಯಾಂಕೋಜೆಬ್ 3ಗ್ರಾಂ+ ಇಮಿಡಕ್ಲೋಪ್ರಿಡ್ 0.50 ಮಿ.ಲೀ. ಔಷಧಗಳನ್ನು ಬೆರೆಸಿ ಗಿಡದ ಎಲ್ಲಾ ಭಾಗಗಳು ನೆನೆಯುವಂತೆ ಸಿಂಪಡಣೆ ಮಾಡಬೇಕು.

ಬಿತ್ತನೆಯಾದ 40- 45 ದಿನಗಳ ಬೆಳೆಗೆ ಒಂದು ಲೀಟರ್ ನೀರಿಗೆ ಮ್ಯಾಂಕೋಜೆಬ್ 3 ಗ್ರಾಂ + ಸೈಮೋಕ್ಸಾನಿಲ್ 3 ಗ್ರಾಂ ಬೆರೆಸಿ ಗಿಡದ ಎಲ್ಲಾ ಭಾಗಗಳು ನೆನೆಯುವಂತೆ ಸಿಂಪಡಣೆ ಮಾಡಬೇಕು.

ಬಿತ್ತನೆಯಾದ 55- 60 ದಿನಗಳ ಬೆಳೆಗೆ ಒಂದು ಲೀಟರ್ ನೀರಿಗೆ ಡೈಮಿಥೋಮಾರ್ಫ್ 1 ಗ್ರಾಂ + ಮ್ಯಾಂಕೋಜೆಬ್ 3 ಗ್ರಾಂ ಅಥವಾ ಮ್ಯಾಂಕೋಜೆಬ್ + ಫೆನಾಮಿಡೋನ್ 3ಗ್ರಾಂ ಬೆರೆಸಿ ಗಿಡದ ಎಲ್ಲಾ ಭಾಗಗಳು ನೆನೆಯುವಂತೆ ಸಿಂಪಡಣೆ ಮಾಡಬೇಕು.

ಬಿತ್ತನೆಯಾದ 65-70 ದಿನಗಳ ಬೆಳೆಗೆ ಒಂದು ಲೀಟರ್ ನೀರಿಗೆ ಫೇಮಾಕ್ಸಾಡೋನ್ + ಸೈಮೋಕ್ಸನಿಲ್ 1ಮಿ.ಲೀ. ಅಥವಾ ಅಮೆಟೋಕ್ಟ್ರಾಡಿನ್ 27% + ಡೈಮೆಥೋಮಾರ್ಫ್ 20.27%. s.c 2ಮಿ.ಲೀ. ಬೆರೆಸಿ ಗಿಡದ ಎಲ್ಲಾ ಭಾಗಗಳು ನೆನೆಯುವಂತೆ ಸಿಂಪಡಣೆ ಮಾಡಬೇಕು. ಮಳೆ ಇರುವುದರಿಂದ ಔಷಧಗಳು ಗಿಡಗಳ ಭಾಗಗಳ ಮೇಲೆ ಸ್ವಲ್ಪ ಸಮಯದ ಕಾಲ ಇರುವುದಕ್ಕೆ ಅಂಟು ದ್ರಾವಣವನ್ನು (Stick-ers) ಉಪಯೋಗಿಸಬೇಕು.

ಆಲೂಗಡ್ಡೆ ಬೆಳೆಯ ಬೆಳವಣಿಗೆಯ ಹಂತಗಳಲ್ಲಿ ಅಂಗಮಾರಿ ರೋಗ ಕಂಡು ಬಾರದಿದ್ದರೂ ಸಹ ಮುಂಜಾಗ್ರತ ಕ್ರಮವಾಗಿ ಒಂದು ಲೀಟರ್ ನೀರಿಗೆ 3 ಗ್ರಾಂ ಮ್ಯಾಂಕೋಜೆಬ್ ಶಿಲೀಂಧ್ರ ನಾಶಕವನ್ನು ಬೆರೆಸಿ ಈ ಎಲ್ಲಾ ಹಂತಗಳಲ್ಲೂ ಸಿಂಪಡಿಸಬೇಕು, ಅನಗತ್ಯವಾಗಿ ಬೇರೆ ಶಿಲೀಂಧ್ರ ನಾಶಕವನ್ನು ಸಿಂಪಡಿಸಬಾರದು.

ಗಿಡಗಳಲ್ಲಿ ಹೂ ಬಿಡುವ ಸಂದರ್ಭದಲ್ಲಿ ಕೀಟನಾಶಗಳನ್ನು ಉಪಯೋಗಿಸಬಾರದು. ಇದು ಪರಾಗ ಸಂಗ್ರಹ ಮಾಡುವ ಜೇನು ನೊಣಗಳಿಗೆ ಮಾರಕವಾಗುತ್ತದೆ.

ಗಡ್ಡೆಗಳು ಸೂರ್ಯನ ಬೆಳಕಿಗೆ ಒಡ್ಡಿದರೆ, ಹಸಿರು ಬಣ್ಣಕ್ಕೆ ತಿರುಗುತ್ತವೆ. ಇದನ್ನು ತಡೆಯಲು ಗಡ್ಡೆಗಳು ಸೂರ್ಯನ ಬೆಳಕಿಗೆ ಒಡ್ಡದಂತೆ ಕಾಲಕಾಲಕ್ಕೆ ಮಣ್ಣು ಏರಿಸುತ್ತಿರಬೇಕು ಬೇಸಾಯ ಮತ್ತು ಸಸ್ಯ ಸಂರಕ್ಷಣಾ ಕ್ರಮಗಳನ್ನು ಪಾಲಿಸಬೇಕು.

ಮುಂದುವರೆದು, ಹೆಚ್ಚಿನ ಮಾಹಿತಿಗಾಗಿ ರೈತರುಗಳು ಹಾಸನ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಿಲ್ಲಾ ಪಂಚಾಯತ್ ಕಛೇರಿ ಹಾಗೂ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸುವುದು.

**ಮಾಹಿತಿಗಾಗಿ ಅಧಿಕಾರಿಗಳ ವಿವರ:** ಸಹಾಯಕ ತೋಟಗಾರಿಕೆ ಅಧಿಕಾರಿ, ಸಾಲಗಾಮೆ ಹೋಬಳಿ- 9481364989, ಸಹಾಯಕ ತೋಟಗಾರಿಕೆ ಅಧಿಕಾರಿ, ದುದ್ದ- 9844340103, ಸಹಾಯಕ ತೋಟಗಾರಿಕೆ ಅಧಿಕಾರಿ, ಶಾಂತಿಗ್ರಾಮ - 7019816492, ಸಹಾಯಕ ತೋಟಗಾರಿಕೆ ಅಧಿಕಾರಿ, ಕಟ್ಟಾಯ - 8105121994, ಸಹಾಯಕ ತೋಟಗಾರಿಕೆ ಅಧಿಕಾರಿ, ಕಸಬಾ - 9481364989 ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

## ಇಂದು ಜಾನಕಿರವರಿಗೆ ನುಡಿ ನಮನ



**ಆಲೂರು:** ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ, ಚೇತನ ಬಳಗ, ಕಾರ್ಯನಿರತ ಪತ್ರಕರ್ತರ ಸಂಘ, ರಾಜ್ಯ ಸರ್ಕಾರಿ ನೌಕರರ ಸಂಘ, ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಶರಣ ಸಾಹಿತ್ಯ ಪರಿಷತ್ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಹಯೋಗದಲ್ಲಿ, ಜು. 17 ರಂದು ಸಂಜೆ 5 ಗಂಟೆಗೆ ಪಟ್ಟಣದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ, ಇತ್ತೀಚೆಗೆ ನಿಧನರಾದ ಪದ್ಮಭೂಷಣ ಎಸ್.ಜಾನಕಿ ಅಮ್ಮನವರಿಗೆ ನುಡಿ ನಮನ ಏರ್ಪಡಿಸಲಾಗಿದೆ.

**CHANGE OF NAME**

I, **SAFEER AHAMED SHARIFF** S/o H.B. Peer Shariff, residing at Near Ilahi Masjid, Ilahi Nagara, Hassan, Karnataka, have changed my name from **SAFEER AHMED SHARIFF** to **SAFEER AHAMED SHARIFF** for all purposes, vide affidavit dated 15-07-2026 sworn before Notary Farooq Pasha, Hassan.

